ಆ) ದಿನಾಂಕ : 25-10-2000ರಂದು ಕೌನ್ಸಲಿಂಗ್ ನಡೆಸಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿ 3 ವರ್ಷಗಳಿಂದ ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿಗಳನ್ನು ಕೆಲವೊಂದು ಖಾಲಿ ಇರುವ ತಜ್ಞತೆಯ ಹುದ್ದೆಗಳನ್ನು ನೇಮಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಿಗೆ 550 ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿದೆ. ಗ್ರಾಮೀಣ ಪ್ರದೇಶದಲ್ಲಿರುವ ಖಾಲಿ ಹುದ್ದೆಗಳನ್ನು ಹಾಗೂ ಖಾಲಿ ಇರುವ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತಜ್ಞ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸ್ಟಾಫ್ ನರ್ಸ್‌ಗಳನ್ನು ಎ.ಎನ್.ಎಂ. ಹುದ್ದೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಸರ್ಕಾರವು ಈಗಾಗಲೇ ಕೆಲವೊಂದು ಪ್ಯಾರಾ ಮೆಡಿಕಲ್ ಹುದ್ದೆಗಳನ್ನು ವಿಶೇಷವಾಗಿ 875 ಪ್ರಯೋಗಶಾಲಾ ತಂತ್ರಜ್ಞರನ್ನು ಭರ್ತಿ ಮಾಡಿಕೊಂಡಿರುತ್ತದೆ. ಇನ್ನೂ ಕೆಲವು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ವರದಿಯನ್ನೊಪ್ಪಿಸುವುದು

ಶ್ರೀಮತಿ ಭಾಗೀರಥಿ ಮುರುಳಸಿದ್ದನಗೌಡ : ಮಾನ್ಯ ಅಧ್ಯಕ್ಷರೆ, ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷಣಿಯಾದ ಹದಿಮೂರನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು ವರದಿಯನ್ನೊಪ್ಪಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಕಡಿರುದ್ಯಾವರ ಗ್ರಾಮಕ್ಕೆ ಅವಶ್ಯಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಶಿವಾಜೆ ಗ್ರಾಮದ ಕಜೆಪಾದೆಗುಡ್ಡೆ ಬರಮೇಲು ಪ್ರದೇಶಕ್ಕೆ ವಿದ್ಯುತ್ ಕಾಮಗಾರಿ ಕೆಲಸವನ್ನು ಪ್ರಾರಂಭಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

ಹಕ್ಕುಚ್ಯುತಿ ಮಂಡನೆ

ಶ್ರೀ ಸಿ. ಗುರುಸ್ವಾಮಿ, ಶಾಸಕರು, ಅವರಿಗೆ ಅವರ ಕ್ಷೇತ್ರದಲ್ಲಿ ಆಗಿರುವ ಅಗೌರವದ ಬಗ್ಗೆ ನೀಡಿರುವ ಹಕ್ಕುಚ್ಯುತಿ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಸಿ. ಗುರುಸ್ವಾಮಿ ಅವರು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿಕೊಟ್ಟಿದ್ದಾರೆ. ಅವರು

ಅವರ ಕ್ಷೇತ್ರದಲ್ಲಿ ಶಾಸಕನಾಗಿ ಕೆಲಸ-ಮಾಡುವಂಥ ಸಂದರ್ಭದಲ್ಲಿ ಅವರ ಅಗೌರವಕ್ಕೆ, ಹಕ್ಕಿಗೆ ಚ್ಯುತಿ ಬಂದಿದೆ. ಹೀಗಾಗಿ ಅವರು ತಮ್ಮ ಭಾವನೆಗಳು ಏನಿವೆ ಅವುಗಳನ್ನು ಇಲ್ಲಿ ಪ್ರಸ್ತಾವ ಮಾಡುತ್ತಿದ್ದಾರೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಕು. ಯಾವುದೇ ಕ್ಷೇತ್ರದಲ್ಲಿ ಯಾವುದೇ ಶಾಸಕರಿಗೆ ಈ ರೀತಿ ನಮ್ಮ ಹಕ್ಕಿಗೆ ಚ್ಯುತಿ ತರಬಾರದು. ಜನಪ್ರತಿನಿಧಿ ಎಂದರೆ ಅವರಿಗೆ ಗೌರವ ಕೊಡಬೇಕು. ಅಲ್ಲಿನ ಜಿಲ್ಲಾ ಮಂತ್ರಿಗಳೇ ಆ ಒಂದು ಕಾರ್ಯಕ್ರಮದಲ್ಲಿ, ವೇದಿಕೆಯಲ್ಲಿ ಅಗೌರವದ ರೀತಿಯಲ್ಲಿ ನಡೆದುಕೊಳ್ಳುವುದು, ಇದರ ಬಗ್ಗೆ ಮಾನ್ಯ ಸದಸ್ಯರು ಹೆಚ್ಚಿನ ವಿವರಣೆಯನ್ನು ಕೊಡುತ್ತಿದ್ದಾರೆ.

+ ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾವು ಈ ಸದನಕ್ಕೆ ಆಯ್ಕೆಯಾಗಿ ಒಂದು ವರ್ಷಕ್ಕೂ ಹೆಚ್ಚು ಸಮಯವಾಗಿದೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸಕರೇ ಆಗಿರಬಹುದು, ಮುಖ್ಯಮಂತ್ರಿಗಳೇ ಆಗಿರಬಹುದು ಅಥವಾ ಮಂತ್ರಿಗಳೇ ಆಗಿರಬಹುದು, ನಮ್ಮ ನಮ್ಮ ಇತಿಮಿತಿಗಳಲ್ಲಿ, ನಮಗಿರುವ ಹಕ್ಕುಗಳಿಗೊಳಪಟ್ಟು ಕೆಲಸ ಮಾಡಬೇಕಾಗಿರುವುದನ್ನು ನಾವೆಲ್ಲಾ ಮುಖ್ಯವಾಗಿ ಗಮನಿಸಬೇಕಾದ ವಿಚಾರವಾಗಿದೆ. ಇವತ್ತು ನಾನು ಈ ಸದನದ ಸದಸ್ಯನಾಗಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ನನಗಿರುವ ಸವಲತ್ತುಗಳನ್ನು, ಹಕ್ಕುಗಳನ್ನು ಚಲಾಯಿಸಿ, ನನ್ನ ಕ್ಷೇತ್ರದ ಜನತೆ ಏನು ವಿಶ್ವಾಸವಿಟ್ಟು ನನ್ನನ್ನು ಆಯ್ಕೆ ಮಾಡಿದ್ದಾರೆ, ಅವರ ಕೆಲಸಕಾರ್ಯಗಳನ್ನು ನಿರ್ವಹಿಸಲು ನನಗೆ ಕಳೆದ ಒಂದು ವರ್ಷದಿಂದಲೂ ಬಹಳ ತೊಂದರೆಯಾಗಿರುವುದನ್ನು ನಾನು ಈ ಸದನದ ಗಮನಕ್ಕೆ ಕಳೆದ ಮಾರ್ಚಿ ತಿಂಗಳಲ್ಲಿ ಕೂಡ ತಮಗೆ, ಸಭಾನಾಯಕರಿಗೆ ಮತ್ತು ನಮ್ಮ ವಿರೋಧ ಪಕ್ಷದ ನಾಯಕರಿಗೂ ತಿಳಿಸಿರುವುದು ತಮಗೆ ಗೊತ್ತಿದೆ. ಈಗಾಗಲೇ ಮಾನ್ಯ ಕೃಷ್ಣಮೂರ್ತಿಯವರು ಈ ಹಕ್ಕುಚ್ಯುತಿ ಪ್ರಸ್ತಾಪದ ಬಗ್ಗೆ ಮೊನ್ನೆ ಮಂಡಿಸಿದ್ದಾರೆ. ಹಲವಾರು ಸದಸ್ಯ ಮಿತ್ರರು ಈ ವಿಚಾರವನ್ನು ಮಂಡಿಸುವವರಿದ್ದಾರೆ. ಬಹಳ ಗಂಭೀರವಾದ ವಿಚಾರ ಇದಾಗಿದೆ. ಈ ಸದನದ ಸದಸ್ಯರಿಗೆ ಆಗುವ ಅಗೌರವ, ಅವರ ಹಕ್ಕುಗಳನ್ನು ಮೊಟಕುಗೊಳಿಸುವ ಕೆಲಸ-ಕಾರ್ಯಗಳು ನಡೆಯುತ್ತಿರುವುದನ್ನು ಈ ಸದನದ ಎಲ್ಲ ಸದಸ್ಯರು ಪಕ್ಷಾತೀತವಾಗಿ ಪರಿಗಣಿಸಬೇಕೆನ್ನುವ ಮನವಿಯನ್ನು ಇಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ನನ್ನ ಚಾಮರಾಜನಗರ ಕ್ಷೇತ್ರದಲ್ಲಿ ಕಳೆದ ಮಾರ್ಚಿ ತಿಂಗಳ ಮೂರನೇ ತಾರೀಖು ಪ್ರಪ್ರಥಮವಾಗಿ ಮಾನ್ಯ ಜಿಲ್ಲಾ ಮಂತ್ರಿಗಳು ನಮಗಿರುವ, ನಮಗೆ ಕೊಟ್ಟ ಗೌರವ, ನಮಗೆ ಮಾಡಿದ ತೊಂದರೆ ಬಗ್ಗೆ ಹೇಳುತ್ತೇನೆ. ಇದರ ಬಗ್ಗೆ ಹಲವಾರು ಉದಾಹರಣೆಗಳಿವೆ. ಆದರೆ, ನಾನು ಕೇವಲ ಐದೇ ಐದನ್ನು ಇಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಇಲ್ಲಿ ಮುಖ್ಯಮಂತ್ರಿಗಳೂ ಇದ್ದಾರೆ. ಕಳೆದ ಮಾರ್ಚಿ ತಿಂಗಳಿನಲ್ಲಿ ಒಂದು ಬೈ-ಪಾಸ್ ರಸ್ತೆಯನ್ನು ನನ್ನ ಕ್ಷೇತ್ರದ ಶಾಸಕನಾದ ನನ್ನ ಗಮನಕ್ಕೂ ತರದೆ, ಕಾರ್ಯಕ್ರಮ ರೂಪಿಸುವ ಸಂದರ್ಭದಲ್ಲಿಯೂ ಸೌಜನ್ಯಕ್ಕಾದರೂ ಒಂದು ವಿಚಾರಣೆಯನ್ನು ಮಾಡದೆ, ಏಕಾಏಕಿ ಜಿಲ್ಲಾ ಮಂತ್ರಿಗಳು ಅಧಿಕಾರಿಗಳ ಜೊತೆ ಸೇರಿ ಆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಸಂದರ್ಭದಲ್ಲಿ ನಾನು ಪ್ರತಿಭಟನೆ ಕೂಡ ಮಾಡಿದೆ. ಜಿಲ್ಲಾ ಪಂಚಾಯತ್ ಸಭೆಯಲ್ಲಿ ರಾಜುಗೌಡರವರು ಸಹ ಆ ಸಭೆಯಲ್ಲಿದ್ದರು. ಅವರು ನನ್ನನ್ನು ಸಮಾಧಾನಪಡಿಸಿದರು. ನಂತರ, ನಾನು ಮಾನ್ಯ ಮುಖ್ಯಮಂತ್ರಿಯವರಿಗೆ, ತಮಗೆ ಮನವಿಯನ್ನು ಸಲ್ಲಿಸಿದೆ. ಈ ಸದನದಲ್ಲಿ ನನ್ನದೊಂದು ಪ್ರಶ್ನೆ ಏನೆಂದರೆ, ಜಿಲ್ಲಾ ಮಂತ್ರಿಗಳೆಂದರೆ ಯಾರು? ಜಿಲ್ಲಾ ಮಂತ್ರಿಗಳೆಂದರೆ, ಸಂವಿಧಾನದಲ್ಲಿ ಅಥವಾ ಯಾವುದಾದರೂ

ಬೈ ಲಾ ದಲ್ಲಿ, ಅಥವಾ ಯಾವುದಾದರೂ ನಿಯಮದಲ್ಲಿ ಇದರ ಬಗ್ಗೆ ವಿವರಣೆ ಇದೆಯೇ? ಆಡಳಿತದ ಹಿತದೃಷ್ಟಿಯಿಂದ ನೀವು ಜಿಲ್ಲಾ ಮಂತ್ರಿಗಳನ್ನು ನೇಮಿಸಿದ್ದೀರಿ. ಆ ಜಿಲ್ಲಾ ಮಂತ್ರಿಗಳ ಕರ್ತವ್ಯವೇನು? ನಾನು ಅದೇ ಪ್ರಶ್ನೆಯನ್ನು ಈ ಸದನದಲ್ಲಿ ಎತ್ತಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು, ಜಿಲ್ಲಾ ಮಂತ್ರಿಗಳೆಂದರೆ, ಜಿಲ್ಲೆಯಲ್ಲಿ ಬರುವ ಕೆ.ಡಿ.ಪಿ. ಮೀಟಿಂಗ್‌ಗಳು ಮತ್ತು ಇಪ್ಪತ್ತು ಪಾಯಿಂಟ್ ಕಾರ್ಯಕ್ರಮಗಳನ್ನು ರಿವ್ಯೂ ಮಾಡುವ ಕೆಲಸ ಮಾತ್ರ ಅವರಿಗೆ ಇರುತ್ತದೆಂದು ಇದೇ ಸದನದಲ್ಲಿ ಸ್ಪಷ್ಟವಾಗಿ ಉತ್ತರ ನೀಡಿದ್ದಾರೆ. ಇದಾದ ನಂತರ, ಮಾನ್ಯ ಮುಖ್ಯಮಂತ್ರಿಗಳು ಸಹ ಆರ್.ಡಿ.ಪಿ.ಆರ್. ಕಾರ್ಯದರ್ಶಿಯವರಿಗೆ ಪತ್ರ ಬರೆದು, ಇಂಥ ಶಾಸಕರು ಇಂಥ ಮನವಿ ಮಾಡಿದ್ದು, ಅವರಿಗೆ ಇಂಥ ಅನ್ಯಾಯವಾಗಿದೆ. ಆದ್ದರಿಂದ ದಯವಿಟ್ಟು ಇನ್ನು ಮುಂದೆ ಅಂಥ ಅನ್ಯಾಯವಾಗದಂತೆ ನೋಡಿಕೊಳ್ಳಿ ಎಂದು ತಿಳಿಸಿದ್ದಾರೆ. ಅದನ್ನು ಜಿಲ್ಲಾ ಮಂತ್ರಿಯವರಿಗೂ ಕೂಡ ಕೊಟ್ಟಿದ್ದಾರೆ. ಅದರ ಕಾಪಿ ಕೂಡ ಇಲ್ಲಿದೆ. ಇಷ್ಟಿದ್ದರೂ ಸಹ, ಮಾನ್ಯ ಜಿಲ್ಲಾ ಮಂತ್ರಿಗಳು ನನ್ನ ಚಾಮರಾಜನಗರ ಕ್ಷೇತ್ರದಲ್ಲಿ, ಬಹುಶಃ ವೀರಪ್ಪನ್ ಜೊತೆಯಲ್ಲಿ ವೀರಪ್ಪನ್ ಸಂಗಾತಿ ಜೊತೆಯಲ್ಲಿ ಚೆನ್ನಾಗಿರಬಹುದೇನೋ? ಆದರೆ, ಜಿಲ್ಲಾ ಮಂತ್ರಿಗಳ ಜೊತೆಯಲ್ಲಿ ಕೆಲಸ ಮಾಡಲು ಕಷ್ಟವಾಗಿರುವ ಪರಿಸ್ಥಿತಿ ನಮಗೆ ಉದ್ಭವವಾಗಿದೆ. ಇದಾದ ನಂತರ, ಮಾನ್ಯ ಜಿಲ್ಲಾ ಮಾನ್ಯ ಮಂತ್ರಿಗಳು ಮತ್ತೆ ಒಂದು ಬರ ಪರಿಹಾರಕ್ಕೋಸ್ಕರ ಕಲಾಮಿಟಿ ರಿಲೀಫ್ ಫಂಡ್‌ನಲ್ಲಿ 35 ಲಕ್ಷ ರೂಪಾಯಿಗಳನ್ನು ನನ್ನ ಕ್ಷೇತ್ರಕ್ಕೆ ಮಂಜೂರು ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಜಿಲ್ಲಾ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ವಾರ್ನ್ ಮಾಡಿದ ಮೇಲೆಯೂ ಸಹ...

ಅಧ್ಯಕ್ಷರು : ಮಾನ್ಯ ಸದಸ್ಯರು ಎಂಟು ದಿವಸಗಳ ಹಿಂದೆ ಪ್ರಿವಿಲೆಜ್ ಮೋಷನ್ ಕೊಟ್ಟಿದ್ದು, ಅದು ಅಡ್ಮಿಟ್ ಆಗಿದೆ. ಅವರು ಪ್ರಿವಿಲೆಜ್ ಆಗಿದೆಯೋ, ಇಲ್ಲವೋ ಎನ್ನುವ ಕನ್‌ಸೆಂಟ್‌ಗೋಸ್ಕರ ಕೇಳುತ್ತಿದ್ದಾರೆ. 7ನೇ ತಾರೀಖು ಅದನ್ನು ತೆಗೆದುಕೊಳ್ಳೋಣವೆಂದು ಹೇಳಿದ್ದೆವು.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಮಂತ್ರಿಗಳು) : ಪ್ರಿವಿಲೇಜ್ ಆಗಿದೆಯೋ, ಇಲ್ಲವೋ ಎಂಬುದಕ್ಕೆ ಕನ್‌ಸೆಂಟ್ ತೆಗೆದುಕೊಳ್ಳಬೇಕು. ಪ್ರಿವಿಲೆಜ್ ಆಗಿದೆ ಎಂದು ಹೇಳಿ ಎಲ್ಲಾ ವಿಚಾರವನ್ನೂ ಪ್ರಿವಿಲೇಜ್‌ನಲ್ಲಿ ಏನು ಹೇಳಬಹುದೋ ಅದನ್ನು ಹೀಗೆ ಅವಕಾಶ ಪಡೆದುಕ್ಕೊಂಡು ಹೇಳುತ್ತಾ ಕುಳಿತರೆ ಹೇಗೆ?

MR. SPEAKER : Whether I can send it to the Privilege Committee. ಎನ್ನುವ ಬಗ್ಗೆ ಅವರು ಹೇಳುತ್ತಿದ್ದಾರೆ. Don't go into details.

ಶ್ರೀ ಕೆ.ಹೆಚ್. ರಂಗನಾಥ್ : ಪ್ರಿವಿಲೆಜ್ ಹೌದೋ ಅಥವಾ ಅಲ್ಲವೋ ಎಂದು ಹೇಳಬೇಕಾಗಿರುವುದು ತಮಗೆ ಸಂಬಂಧಪಟ್ಟ ವಿಚಾರ. ತಾವು ನಿರಾಕರಣೆ ಮಾಡಿದರೆ, ನಂತರ, ಅವರು ಸಬ್‌ಸ್ಟಾನಿಯೇಟ್ ಮಾಡಬೇಕು. ನಂತರ, ಇಂಥ ರೂಲ್‌ನಡಿಯಲ್ಲಿ ಪ್ರಿವಿಲೇಜ್ ಆಗುತ್ತದೆಯೆಂದು ಹೇಳಬೇಕು. ಚಾಮರಾಜನಗರದಲ್ಲಿ ನಡೆದದ್ದನ್ನು ಇಲ್ಲಿ ತಂದು ಪ್ರಿವಿಲೇಜ್ ಎಂದು ಹೇಳುತ್ತಾ ಕುಳಿತರೆ ಹೇಗೆ? ಇರಬಹುದು ಮಾನ್ಯ ಸದಸ್ಯರಿಗೆ ತೊಂದರೆಯಾಗಿರಬಹುದು, ಮಾನಸಿಕ ವೇದನೆಯಾಗಿರಬಹುದು.

ಅದನ್ನು ತಮ್ಮ ಮೂಲಕ ಪ್ರಸ್ತಾಪಿಸುವುದು ಸೌಜನ್ಯ. ಅದು ಬಿಟ್ಟು, ಪ್ರಿವಿಲೇಜ್ ಮೋಷನ್ ಇದೆ, ಎಂದು ಹೇಳಿ, ನಾವು ಎಲ್ಲಿಗೆ ಬೇಕಾದರೂ ಕೊಟ್ಟು, ಈ ಸಭೆಯನ್ನು ನಾವು ಯಾವುದೋ ರೂಪಕ್ಕೆ ತರುತ್ತಾ ಹೋದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಸದಸ್ಯರು ಹಕ್ಕುಚ್ಯುತಿ ಪ್ರಸ್ತಾಪ ತಂದಿದ್ದಾರೆ. ತಮ್ಮನ್ನು ಕನ್‌ವಿನ್ಸ್ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಅಧ್ಯಕ್ಷರು : ಎನ್‌ಟೈರ್ ಸಬ್ಜೆಕ್ಟ್ ಅನ್ನು ಡಿಸ್ಕಸ್ ಮಾಡುತ್ತಾ ಹೋದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಅವರು ಏನೂ ಇನ್ನೂ ಮೆನ್‌ಷನ್ ಮಾಡಿಲ್ಲ.

MR. SPEAKER : He is going into the details. ನಾನು ಇನ್ನೂ ಕನ್‌ಸೆಂಟ್ ಕೊಟ್ಟಿಲ್ಲ. Even to give consent. ಬ್ರೀಫ್ ಆಗಿ ಮೆನ್‌ಷನ್ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಕ್ಕುಬಾಧ್ಯತೆ ಪ್ರಸ್ತಾಪದ ಬಗ್ಗೆ ನಮ್ಮ ಸದನದ ನಿಯಮಗಳು 192 ಮತ್ತು 193ರಲ್ಲಿ ಕ್ಲಿಯರ್ ಆಗಿ ನಮೂದು ಇದೆ. ಮೊಟ್ಟ ಮೊದಲನೆಯ ವಿಚಾರವೆಂದರೆ, ತಾವು ಎಂಟು ದಿವಸಗಳ ಹಿಂದೆ ಅವರು ಕಾಗದ ಬರೆದರೆಂದು ಅಪ್ಪಣೆ ಕೊಡಿಸಿದಿರಿ. ಆದರೆ, ನಿಯಮ 192ನ್ನು ತಾವು ಪರಾಂಬರಿಸಿದರೆ, "A member wishing to raise a question of privilege shall give notice in writing to the Secretary before the commencement of the sitting on the day the question is proposed to be raised. If the question raised is based on a document, the notice shall be accompanied by the document. I would like to know from you Sir, without meaning offence to you, whether it has been received today.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳು ಒಂದು ಪಾಯಿಂಟ್ ರೈಸ್ ಮಾಡಿದ್ದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಕಳೆದ ಬಾರಿ ಯಾವಾಗ ಕೃಷ್ಣಮೂರ್ತಿಯವರು ಇದನ್ನು ರೈಸ್ ಮಾಡಿದ್ದರೋ, ಆಗ ಇದನ್ನು ಮೆನ್‌ಷನ್ ಮಾಡಲು ಅವಕಾಶ ಕೇಳಿದರು. ಆಗ ತಾವು 7ನೇ ತಾರೀಖು ಹಾಗೂ ಸಮಯ ಫಿಕ್ಸ್ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಪ್ರಕಾರ, ತಮ್ಮ ಅನುಮತಿ ಮೇರೆಗೆ, ಇವತ್ತು ಅವರು ಮೆನ್‌ಷನ್ ಮಾಡಿದ್ದಾರೆ. ನಿಯಮ 194ರ ಪ್ರಕಾರ, "ಹಕ್ಕು ಬಾಧ್ಯತಾ ಪ್ರಶ್ನೆಯನ್ನು ಎತ್ತುವ ರೀತಿ - (1) ಅಧ್ಯಕ್ಷರು 192ನೇ ನಿಯಮದ ಮೇರೆಗೆ ಅನುಮತಿ ನೀಡಿದಾಗ, ಹಾಗೂ ಚರ್ಚಿಸಬೇಕಾದ ವಿಷಯವು ಕ್ರಮವಾಗಿವೆಯೆಂದು ಭಾವಿಸಿದಾಗ ಪ್ರಶ್ನೆಗಳ ತರುವಾಯ ಮತ್ತು ಕಾರ್ಯಕಲಾಪಗಳ ಪಟ್ಟಿಯು ಪ್ರಾರಂಭವಾಗುವುದಕ್ಕೆ ಮುಂಚೆ, ಪ್ರಶ್ನಿಸಲು ಅಪೇಕ್ಷಿಸುವ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರೆಯತಕ್ಕದ್ದು. ಆ ಸದಸ್ಯರು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲತಕ್ಕದ್ದು ಮತ್ತು ಹಕ್ಕು ಬಾಧ್ಯತೆ ಪ್ರಶ್ನೆಯನ್ನು ಪ್ರಸ್ತಾಪಿಸಲು, ಎತ್ತಲು ಅನುಮತಿ ಕೋರಿ, ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಹೇಳಿಕೆಯನ್ನು ನೀಡಬೇಕು" ಎಂದಿದೆ. ಅದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ.

ಅವರು ಇಂದು ಅದನ್ನು ಪ್ರಸ್ತಾಪಿಸುತ್ತಿದ್ದಾರೆ. ಅದಕ್ಕೆ ಸಂಕ್ಷಿಪ್ತವಾದ ಹೇಳಿಕೆಯನ್ನು ಕೊಡಲು ತಾವು ಅವರಿಗೆ ಅವಕಾಶ ಕೊಡಬೇಕು.

MR. SPEAKER : You please leave it to me.

ಶ್ರೀ ಕೆ.ಹೆಚ್. ರಂಗನಾಥ್ : ನಿಯಮ 191 ಏನು ಹೇಳುತ್ತದೆಂದರೆ, "A member may, with the consent of the Speaker, raise a question involving a breach of privilege either of a member, or the House or of a Committee thereof. ಸದಸ್ಯರು ಹೇಳಿರುವ ವಿಚಾರ, ಹೌಸ್‌ನಲ್ಲಿ ಅಥವಾ ಸಮಿತಿಯಲ್ಲಿ ಆಗಿದ್ದಲ್ಲ. ಈ ಘಟನೆ ಚಾಮರಾಜನಗರದಲ್ಲಿ ಎಂಬುದನ್ನು ನಾನು ಕೇಳಿಸಿಕೊಂಡೆ. ಅದು ಏನಾಗಿದೆಯೋ ಗೊತ್ತಿಲ್ಲ. ಯಾವುದೋ ರಸ್ತೆ ಓಪನ್ ಆಗದಿದ್ದರೆ, ಆಹ್ವಾನ ಹೋಗದಿದ್ದರೆ, ಪ್ರಿವಿಲೆಜ್ ಆಗುತ್ತದೆಯೇ?

(ಗೊಂದಲ)

MR SPEAKER : Don't take down.

ಅಧ್ಯಕ್ಷರು : ಮಂತ್ರಿಗಳು ಮೊದಲು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿ. ಗುರುಸ್ವಾಮಿ : ಚಾಮರಾಜನಗರ ತಮಿಳುನಾಡಿನಲ್ಲಿ ಇಲ್ಲ ಅದು ಕರ್ನಾಟಕದಲ್ಲಿದೆ.

MR SPEAKER : When the Minister has started to speak, please resume your seat.

ಶ್ರೀ ಕೆ.ಹೆಚ್. ರಂಗನಾಥ್ : ಈ ಘಟನೆ ಯಾವಾಗ ಆಯಿತು, ಏನಾಯಿತು ಎಂದು ತಮಗೆ ಬರೆದಿರುವ ಪತ್ರದಲ್ಲಿ ಅವರು ಆಪಾದನೆ ಮಾಡಿದ್ದರೆ ಆಗ ತಾವು ಅದನ್ನು ಓದಿ ಅದು ಸರಿಯೆಂದು ಕಂಡರೆ ಮಾತ್ರ ಮುಂದಿನ ಪ್ರಶ್ನೆ ಉದ್ಭವಿಸುತ್ತದೆ.

(Interruption)

MR. SPEAKER : I am here to answer. You are not the person to answer the Minister.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಕೇಳಿಸಿಕೊಂಡಿದ್ದು ಯಾವುದೋ ಒಂದು ಚಾಮರಾಜನಗರ ಅಲ್ಲ ಇರೋದೇ ಒಂದು ಚಾಮರಾಜನಗರ.

(Interruption)

ಶ್ರೀ ಕರಿಯಣ್ಣ : ಹಿರಿಯ ಸಚಿವರು, ಸಭಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದಂಥವರು ಎದ್ದು ನಿಂತು ಮಾತನಾಡುವಂಥ ಸಂದರ್ಭದಲ್ಲಿ ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿದರೆ ಹೇಗೆ?

ನಮಗೆ ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ಬರುತ್ತದೆ. ವಿರೋಧ ಪಕ್ಷದ ನಾಯಕರು ಇಲ್ಲಿ ಇದ್ದಾರೆ ಅವರು ಮಾತನಾಡುತ್ತಾರೆ, ಹಿರಿಯರು ಅಷ್ಟು ಮಾತನಾಡುತ್ತಿರುವಾಗ ಕೇಳುವಷ್ಟು ಸೌಜನ್ಯ ಇಲ್ಲವೆಂದರೆ ಹೇಗೆ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಮಗೆ ಬರೆದು ಕೊಟ್ಟಿದ್ದರಲ್ಲಿ ಹಕ್ಕುಚ್ಯುತಿ ಎಂದು ತಮಗೆ ಕಂಡು ಬಂದಲ್ಲಿ ನಂತರ ತಾವು ಒಪ್ಪಿಗೆ ಕೊಟ್ಟರೆ ಆ ಮಾತು ಬೇರೆ, ನಾನು ಕೂಡ ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಕೇಳುತ್ತಿದ್ದೇನೆ. ನಾನು ಕೇಳಿಸಿಕೊಂಡ ಹಾಗೆ ರಸ್ತೆಯ ವಿಚಾರವಾಗಿ ನನ್ನನ್ನು ಕರೆಯಲಿಲ್ಲ ಜಿಲ್ಲೆಗೆ ಸಂಬಂಧಪಟ್ಟಂತೆ ಮಂತ್ರಿಗಳನ್ನು ಮಾಡಿದ್ದೀರಿ ಅವರ ಕಾರ್ಯವೇನು? ಎಂದು ಕೇಳಿದರು, ಇದು ಹಕ್ಕುಚ್ಯುತಿಗೆ ಬರುತ್ತದೆಯೇ? In what way the privilege of the hon. member has been offened? ಎಂಬುದನ್ನು ಅವರು ಹೇಳಬೇಕು. ಇದನ್ನವರು ಅವರ ಪತ್ರದಲ್ಲಿ ತಿಳಿಸಬೇಕಾಗುತ್ತದೆ. ಅದನ್ನು ತಾವು ಓದಿ ಅದು ಹೌದು ಎಂದು ತಮಗೆ ಒಪ್ಪಿಗೆ ಆದರೆ, ತಾವು ಅದಕ್ಕೆ ಅನುಮತಿ ಕೊಟ್ಟರೆ ಮುಂದಿನ ವಿಚಾರ ಇಲ್ಲಿ ನಡೆಯತಕ್ಕದು. ಆದ್ದರಿಂದ ಅವರು ಇಲ್ಲಿ ಪ್ರಸ್ತಾಪಿಸುವ ಮೂಲಕ 190ರ ನಿಯಮ ಬಳಸಿಕೊಂಡು ಬೇರೆ ಬೇರೆ ವಿಚಾರ ಹೇಳಿಕೊಂಡು ಸುದ್ದಿಮಾಡತಕ್ಕಂಥದ್ದು ಸರಿ ಹೋಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ಸುಮಾರು ಒಂದು ವಾರದ ಹಿಂದೆಯೇ ಹಕ್ಕುಚ್ಯುತಿ ಪ್ರಸ್ತಾವದ ಸೂಚನೆಯನ್ನು ನನಗೆ ನೀಡಿದ್ದರು. ನಾನು ಈಗಾಗಲೇ ಒಂದು ಸಲ ಅವಕಾಶ ಕೊಟ್ಟಿದ್ದೆ. On the floor of the house it has been allowed. ಆದರೆ ಆ ದಿನ ಸಮಯ ಸಾಲಲಿಲ್ಲ ಬೇಕಾದರೆ ಏಳನೇ ತಾರೀಖು ತಾವು ಪ್ರಸ್ತಾಪಿಸಿ ಎಂದು ಹೇಳಿದ್ದೆ. ಈಗ ಅವರು ಎರಡು-ಮೂರು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು, He cannot go to details about the entire matter.

ಶ್ರೀ ಕೆ.ಹೆಚ್. ರಂಗನಾಥ್ : ಇವತ್ತಿನ ಚರ್ಚೆಯ ವಿಷಯ ನಮಗೆ ಬಂದಿಲ್ಲ. ನಮ್ಮ ಅಜೆಂಡಾದಲ್ಲಿ ತಾವು ಏನು ಮಾಡಿದ್ದೀರಿ, ಅವರು ಏನು ಅಪಾದನೆ ಮಾಡಿದ್ದಾರೆ, ಇದು ಯಾವುದೂ ನಮ್ಮ ಹತ್ತಿರ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ರೂಲಿಂಗ್ ಕೊಟ್ಟ ಮೇಲೂ ಹಿರಿಯ ಮಂತ್ರಿಗಳು ಪ್ರಶ್ನಿಸುತ್ತಾರೆಂದರೆ....

(ಗೊಂದಲ)

MR. SPEAKER : Please don't note down. ಒಟ್ಟಿಗೆ ಐದಾರು ಜನ ಮಾತನಾಡಿದರೆ ಅದನ್ನು ರೆಕಾರ್ಡ್ ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ಒಂದು ಸಲ ರೂಲಿಂಗ್ ಕೊಟ್ಟ ಮೇಲೆ ಪುನಃ ಅದನ್ನೇ ಪ್ರಶ್ನಿಸುವುದು ಸರಿಯಲ್ಲ. ಇದು ತಮ್ಮ ಗೌರವಕ್ಕೆ ಕುಂದು ತರುವಂಥದ್ದು. ಈಗ ತಾವು ಸಂಕ್ಷಿಪ್ತವಾಗಿ

ಹೇಳಿ ಎಂದು ರೂಲಿಂಗ್ ಕೊಟ್ಟ ಮೇಲೂ ಅವರು ಕ್ರಿಯಾಲೋಪದ ಬಗ್ಗೆ ಮಾತನಾಡುತ್ತಾ ಹೋದರೆ ಇದು ಸರಿಯಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಏಕೆ ಆ ಪ್ರಶ್ನೆ ಹೇಳಿದೇನೆಂದರೆ, ಅದನ್ನು ಪ್ರಸ್ತಾಪಿಸಿದ ಮೇಲೆ that becomes the property of the House. The House will have to exercise its mind. ಅದು ಸರಿಯೋ, ತಪ್ಪೇ ಎಂದು ವಿಚಾರ ಮಾಡುವುದಕ್ಕೆ ಈ ಸಭೆಗೆ ಅವಕಾಶಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಹೇಳುವುದಾದರೆ, ಅವರು ಕೊಟ್ಟ ನೋಟೀಸು ನಿಮಗೆ ಒಪ್ಪಿಗೆಯಾಗಿ ಬಂದಿದ್ದರೆ ಅದು ಬರಬೇಕಾಗಿತ್ತು, ಆದರೆ ಇಲ್ಲಿ ಬಂದಿಲ್ಲ. ಅದರಲ್ಲಿ ಏನು ಅಪಾದನೆ ಮಾಡುತ್ತಾರೆ ಅಷ್ಟೇ ಪ್ರಸ್ತಾಪವಾಗಬೇಕಾಗುತ್ತದೆ. ಬೇರೆ ವಿಚಾರ ಪ್ರಸ್ತಾಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಒಪ್ಪಿಗೆ ಕೊಟ್ಟಿದ್ದರೆ ಮತ್ತೊಂದು ದಿವಸ ಮಾಡಬಹುದು ಇದಕ್ಕೇನು ನಮ್ಮದು ಅಭ್ಯಂತರವಿಲ್ಲ. ಮಾನ್ಯ ಸದಸ್ಯರ ಹಕ್ಕುಬಾಧ್ಯತೆಗೆ ಚ್ಯುತಿ ಬಂದರೆ ಅದನ್ನು ಇಲ್ಲಿ ತರಬಾರದು ಎನ್ನುವ ವಿಚಾರ ನನ್ನದಲ್ಲ. ಆದರೆ ಅದಕ್ಕೆ ಇರುವ ಕ್ರಮ ಏನು? ಅವರು ಕೊಟ್ಟ ತಕ್ಷಣ ನೀವು ಒಪ್ಪಿಗೆ ಕೊಟ್ಟಿದ್ದೀರಿ ಎಂದರೆ it becomes the property of this august house. ಅದರಲ್ಲಿ ಏನು ಅಪಾದನೆ ಮಾಡಿದ್ದಾರೆ ಅದು ಹಕ್ಕುಚ್ಯುತಿ ಆಗಬಹುದೇ ಅಥವಾ ಇಲ್ಲವೇ ಎಂಬುದನ್ನು ವಿಚಾರ ಮಾಡಿಸುವುದಕ್ಕೆ ಸದನಕ್ಕೂ ಕೂಡ ಅವಕಾಶ ಬೇಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಹಿರಿಯ ಸಚಿವರಾದವರು, ಸಭಾಧ್ಯಕ್ಷರಾದವರು, ಮಾನ್ಯ ರಂಗನಾಥ್‌ನವರು ಕಾನೂನು ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ನನ್ನ ಒಂದು ಸಬ್‌ಮಿಷನ್ ಏನೆಂದರೆ, ಕಾನೂನು ಪಾಂಡಿತ್ಯ ಏನಿದೆ ಅದು it should not make one person insensitive. ಇವತ್ತು ಇಲ್ಲಿ ಹೇಳುವುದು ಬಹಳ ಸುಲಭ. ಯಾವುದೋ ರಸ್ತೆ ವಿಚಾರಕ್ಕೆ ಇವರನ್ನು ಕರೆದಿದ್ದರೆ ಹಕ್ಕುಚ್ಯುತಿಯಾಗುತ್ತದೆಯೇ ಎಂದು ಹೇಳುವುದು ಸುಲಭ. ಇಲ್ಲಿ ಪ್ರಶ್ನೆ ಇರುವುದು ಈ ಘಟನೆ ನಡೆದಿರುವುದು ಇಲ್ಲಿಂದ 150-170 ಕಿಲೋಮೀಟರ್ ದೂರದಲ್ಲಿ ಆ ದಿನ ಸ್ಥಿತಿ ಏನಾಗಿತ್ತೋ ಏನೋ ನಮಗೆ ಗೊತ್ತಿಲ್ಲ. ಪ್ರಾಯಶಃ ಇಲ್ಲಿರುವ ಯಾರಾದರೊಬ್ಬ ಸಚಿವರಿಗೆ ಈ ರೀತಿಯ ಅವಮಾನ ಆಗಿದ್ದರೆ ಏನಾಗುತ್ತಿತ್ತು? ಯಾವುದೋ ಒಂದು ಸಾರ್ವಜನಿಕ ಸಮಾರಂಭದಲ್ಲಿ ಕುರ್ಚಿಯ ಎತ್ತರ ಎರಡು ಇಂಚು ಕಡಿಮೆಯಾಯಿತು ಎನ್ನುವ ವಿಷಯಕ್ಕೆ ಈ ರಾಜ್ಯದಲ್ಲಿ ದೊಡ್ಡ ಗಲಾಟೆಯಾಯಿತು. ಹಾಗಿರುವಾಗ, ಸನ್ಮಾನ್ಯ ಅಧ್ಯಕ್ಷರು ಹೇಳಿದಾಗೆ It has been admitted. ಆ ದಿನ ಅವಕಾಶ ಕೊಟ್ಟು. ಆ ದಿನ ಸಮಯ ಸಿಗದೇ ಇದ್ದುದರಿಂದ 7ನೇ ತಾರೀಖು ಅಥವಾ ಮಂಡಿಸಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಈಗ ಸಮಸ್ಯೆ ಏನೆಂದರೆ ಇದು ಇವತ್ತಿನ ಅಜೆಂಡಾದಲ್ಲಿ ಬಂದಿಲ್ಲವೆಂದು ಹಿರಿಯ ಸಚಿವರು ಹೇಳುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ನನಗೆ ಕೇಳುವುದಕ್ಕೆ ಹಕ್ಕು ಇಲ್ಲವೇ?

ಶ್ರೀ ಎಸ್. ಸುರೇಶ್ ಕುಮಾರ್ : ಖಂಡಿತ ತಮಗೆ ಹಕ್ಕು ಇದೆ.

ಶ್ರೀ ಕೆ.ಹೆಚ್. ರಂಗನಾಥ್ : The very moment when the Hon. Speaker says that he has agreed, then my right is also there.

ಶ್ರೀ ಎಸ್. ಸುರೇಶ್ ಕುಮಾರ್ : ನಿಮಗೆ ಹಕ್ಕು ಇದೇ ಅದೇ ರೀತಿಯಲ್ಲಿ ಹೊಸ ಸದಸ್ಯರ ರಕ್ಷಣೆಗೆ ಹೋಗುವುದು ನಿಮ್ಮ ಜವಾಬ್ದಾರಿಯು ಇದೆ.

(ಗೊಂದಲ)

ಶ್ರೀ ಎಂ. ಮಹಾದೇವ್ (ಮಾನ್ಯ ರೇಷ್ಮೆ ಸಚಿವರು) : ಅವರು ಏನು ಅಪಾದನೆ ಇದೆ ಎಂಬುದನ್ನು ಸದನದಲ್ಲಿ ಸ್ಪಷ್ಟವಾಗಿ ಹೇಳಬೇಕು ನಂತರ ನಾವು ಕ್ರಮ ಕೈಗೊಳ್ಳಬಹುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರಾದ ಶ್ರೀ ಗುರುಸ್ವಾಮಿಯವರು ತಮ್ಮ ವಿಚಾರವನ್ನು ಹೇಳುವುದಕ್ಕೆ ಇವರು ಅವಕಾಶ ಕೊಡುತ್ತಿಲ್ಲವಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳಲ್ಲಿ ವಿನಂತಿ, ಸಾಮಾನ್ಯವಾಗಿ ಹಕ್ಕುಚ್ಯುತಿ ಪ್ರಸ್ತಾವವನ್ನು ಅಜೆಂಡಾದಲ್ಲಿ ಸೇರಿಸುವುದಿಲ್ಲ, ನಾನು ಕನ್‌ಸೆಂಟ್ ಕೊಟ್ಟ ಮೇಲೆ 10 ಜನ ಎದ್ದು ನಿಂತುಕೊಂಡು ಅದರ ಬಗ್ಗೆ ದೀರ್ಘವಾದ ಚರ್ಚೆ ಇಲ್ಲಿ ಮಾಡಬೇಕು. ಅವರ ಪರವಾಗಿ ಇಲ್ಲಿ 10 ಜನ ಎದ್ದು ನಿಂತುಕೊಳ್ಳಬೇಕಾಗುತ್ತದೆ. ನಾವು ಇಲ್ಲಿ ವೋಟಿಂಗ್ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್ : ಅಧ್ಯಕ್ಷರೇ, I may kindly be permitted to differ Rules 191, 192 and 193 should be all put together. You cannot isolate one from the other ಇದು ಸಾಧ್ಯವಾಗುವುದಿಲ್ಲ. ಅದು ತಪ್ಪಾಗುತ್ತದೆ. ಅವರೇನು ಆಪಾದನೆ ಮಾಡಿದ್ದಾರೆ? ಆ ಪ್ರಸ್ತಾವವನ್ನು ನಿರ್ಧರಿಸುವುದು ಈ ಸದನ. ಅದೇನು ಆಪಾದನೆ ಎಂಬುದು ಈ ಸಭೆಯ ಮುಂದೆ ಬರುವುದು ಬೇಡವೆ? ಅದನ್ನು ನಾವು ನೋಡುವುದು ಬೇಡವೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ಇದಕ್ಕೆ ಅವಕಾಶ ಕೊಟ್ಟಿದ್ದೀರಿ, ಏಳು ದಿವಸದ ಹಿಂದೆ ಅವಕಾಶ ಕೊಟ್ಟಿದ್ದರೂ ನೀವೇ ಹೇಳಿದಂತೆ 7ನೇ ತಾರೀಖು ಪ್ರಸ್ತಾಪಿಸಿ ಎಂದು ಸೂಚಿಸಿದ್ದಕ್ಕೆ ನಿನ್ನೆ ಇದು ಆಗಲಿಲ್ಲ ಇವತ್ತು ಪುನಃ ನೀವು ಅದಕ್ಕೆ ಅವಕಾಶ ಕೊಟ್ಟ ಮೇಲೂ ಅವರು ಪುನಃ ಪುನಃ ಇದೇ ಪ್ರಶ್ನೆ ಪ್ರಸ್ತಾಪಿಸದರೆ ಹೇಗೆ? ಹೇಳಿದ್ದೇ ಹೇಳುವುದರಲ್ಲಿ ಏನು ಅರ್ಥವಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೂಲ್ ಹೇಗೆ ಪರ್ಮಿಟ್ ಮಾಡುತ್ತದೆ ಅದನ್ನವರು ಹೇಳುತ್ತಾರೆ ಹೀಗಿರುವಾಗ ಅವರು ಹೇಳಿದ್ದೇ ಹೇಳುತ್ತಾರೆಂದರೆ ಏನರ್ಥ? ಅವರ ಉತ್ತರ ಮುಗಿಯಿಲಿ ನಂತರ ತಾವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರಿಗೆ ಪ್ರಸ್ತಾಪಿಸಲಿಕ್ಕೆ ಅವಕಾಶ ಕೊಟ್ಟ ನಂತರ ಇವರು ಹೇಳುವ ಪ್ರಶ್ನೆಯೇ ಬರುವುದಿಲ್ಲ. ಆ ಸದಸ್ಯರಿಗೆ ಒಂದು ರೀತಿಯ ಫೀಲಿಂಗ್ ಆಗಿದೆ.

ಏಕೆಂದರೆ, ಅವರಿಗೆ ತಮ್ಮ ಕ್ಷೇತ್ರದಲ್ಲಿ ಜಿಲ್ಲಾ ಮಂತ್ರಿಗಳಿಂದ ಅನ್ಯಾಯವಾಗಿದೆ, ಅವರ ಗೌರವಕ್ಕೆ ಧಕ್ಕೆ ಬಂದಿದೆ ಎಂದು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಪ್ರಸ್ತಾಪ ಮಾಡಿದ ನಂತರ ಅದನ್ನು ಅಡ್ಮಿಟ್ ಮಾಡಬೇಕೋ ಬೇಡವೋ ಎಂಬುದರ ಬಗ್ಗೆ ನಂತರ ಅವರು ಮಧ್ಯೆ ಪ್ರವೇಶ ಮಾಡಿ ಹೇಳಬೇಕು. ಅವರು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಮಾನ್ಯ ಹಿರಿಯ ಸಚಿವರಾಗಿ, ಈ ಮನೆಯ ಸಭಾಧ್ಯಕ್ಷರಾಗಿ ಕೆಲಸ ಮಾಡಿದಂಥವರು ಈ ರೀತಿ ಮಾಡಿದರೆ ಹೇಗೆ? ಇಲ್ಲಿ ಕೆಲವೊಂದು ರೂಲ್ಸ್ ರೆಗ್ಯೂಲೇಷನ್ ಇರುತ್ತವೆ ಆದರೆ ಮಾನ್ಯ ಸದಸ್ಯರ ಫೀಲಿಂಗ್ ಹೇಳುವುದಕ್ಕೆ ಇಲ್ಲಿ ಅವಕಾಶ ಕೊಡಲಿಲ್ಲವೆಂದರೆ ಈ ಸದನ ಇರುವುದು ಏಕೆ? ಇದರಿಂದ ಹೊರಗಡೆ ಎಂಥ ಸಿಗ್ನಲ್ ಹೋಗುತ್ತದೆ ಎಂದರೆ, ಜನಪ್ರತಿನಿಧಿಗಳು ಒಂದು ಕಡೆ ಇರಲಿ ಹೊಸದಾಗಿ ಆರಿಸಿ ಬಂದಿರತಕ್ಕಂಥ ಜೆಡ್‌ಪಿ ಮಹಿಳಾ ಸದಸ್ಯರು ಹಾಗೂ ಇತರೆ ಹೊಸ ಸದಸ್ಯರಿಗೂ ಕೂಡ ಅಧಿಕಾರಿಗಳು ಕಿಮ್ಮತ್ತು ಕೊಡುತ್ತಿಲ್ಲ. ಅವರು ಕೇಳಿದಂಥ ಮಾಹಿತಿ ಒದಗಿಸುತ್ತಿಲ್ಲ ಇಂತ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಿರುವಾಗ ಅವರಿಗಾಗಿರುವ ಅಗೌರವದ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಇಲ್ಲವೆಂದರೆ ಹೇಗೆ?

ಶ್ರೀ ಕೆ.ಹೆಚ್. ರಂಗನಾಥ್ : ಅಧ್ಯಕ್ಷರೆ, ತಮ್ಮಲ್ಲಿ ನನ್ನೊಂದು ಮನವಿ. I am on my legs ನನ್ನನ್ನು ನೀವು ಕುಳಿತುಕೊಳ್ಳಿ ಎಂದು ಹೇಳಲಿಲ್ಲ. you permitted the Hon. Leader of the Opposition to go on speaking and you are looking at him only. What should I understand?

MR. SPEAKER ; Until the concerned member yields, you cannot speak.

ಶ್ರೀ ಕೆ.ಹೆಚ್. ರಂಗನಾಥ್ : ಇಲ್ಲಿ ಕಾನೂನು ಪ್ರಕಾರ ಸಭೆ ನಡೆಯಬೇಕೇ ವಿನಾಃ ನಾವು ಹೇಗೆ ಬೇಕೋ ಹಾಗೆ ಮಾತನಾಡಿ ಈ ಸಭೆ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ. ನಾನು ಇತರರು ಮಾತನಾಡುವಾಗ ಅವರನ್ನು ಅಡ್ಡಿಪಡಿಸುವವನಲ್ಲ. ಕಾನೂನು ಆಗಲಿ ಅಥವಾ ಇಲ್ಲಿ ನಡೆಯುವ ಕಾಮೆಂಟ್ಸ್ ಆಗಲಿ ಸದನ ಎಂದು ಗುರುತಿಸುತ್ತಾರೆ ವಿನಾಃ ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಎಂದು ಯಾರೂ ಗುರುತಿಸುವುದಿಲ್ಲ. ನಾನು ಆಗಲೇ ಏನು ಹೇಳಿದೇನೆಂದರೆ, ಅವರು ಏನು ತಮಗೆ ಬರೆದು ಕೊಟ್ಟಿದ್ದಾರೆ ಅದಕ್ಕೆ ತಾವು ಒಪ್ಪಿಗೆ ಕೊಟ್ಟ ಮೇಲೆ ಅದು ನಮಗೆ ಬರಬೇಕಾಗುತ್ತದೆ ಏಕೆಂದರೆ, ಪ್ರತಿಯೊಬ್ಬ ಸದಸ್ಯರು ಅದನ್ನು ನೋಡಿ ಓದಬೇಕಾಗುತ್ತದೆ, ನಂತರ ಅದರ ಮೇಲೆ ಅದರ ಬಗ್ಗೆ ಚಿಂತನೆ ಮಾಡುವುದಕ್ಕೆ ಅವಕಾಶ ಆಗಬೇಕು ಎಂದು ಹೇಳಿದೆ, ಇದು ತಪ್ಪೆ?

1.30 ಪಿ.ಎಂ

ಏಕೆಂದರೆ, Privilege matter is a very serious matter. ಇದರ ಬಗ್ಗೆ ಇಡೀ ಸಭೆ ಚಿಂತನೆ ಮಾಡಬೇಕಾಗುತ್ತದೆ. ಅದು ಇಲ್ಲದಿದ್ದರೆ ಹೇಗೆ ಆಗುತ್ತದೆ? I don't want to intervene and come in the way of other friends submitting their case. No. ಆದರೆ ನಾವು

ರೂಲ್ಸ್ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ, ಇವತ್ತಿನ ದಿವಸ ಅಪಾದನೆ ಎಷ್ಟು ಇದೆಯೋ ಅಷ್ಟಕ್ಕೆ ಮಾತ್ರ ಪ್ರಸ್ತಾಪ ಮಾಡಬೇಕಾಗುತ್ತದೆ, ಬೇರೆ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬಾರದು. ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ನಾನು ಏಕೆ ತತ್‌ಕ್ಷಣ ಮಾತನಾಡಿದೆ ಎಂದರೆ, ಮಾನ್ಯ ಮಂತ್ರಿಗಳನ್ನು ಏಕೆ ಜಿಲ್ಲಾ ಮಂತ್ರಿಗಳನ್ನಾಗಿ ಮಾಡಿದ್ದೀರಿ ಎಂಬುದನ್ನೆಲ್ಲಾ ಅವರು ತಮ್ಮ ಪತ್ರದಲ್ಲಿ ಬರೆದಿದ್ದಾರೆಯೇ? If that is the allegation it is not a privilege at all. I can straight away say.

ಅಧ್ಯಕ್ಷರು : ಮಾನ್ಯ ಸದಸ್ಯರು ನನಗೆ ಬರದಿರತಕ್ಕಂತಹ ಪತ್ರದಲ್ಲಿ ಬರೆದಿದ್ದಾರೆ.

SRI K.B. KOLIWAD : Mr. Speaker, Sir, I have got a new point.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ರೂಲ್ 191 ಪ್ರಕಾರ ತಾವು ನೋಟೀಸನ್ನು ಸ್ವೀಕಾರ ಮಾಡಿದ ತಕ್ಷಣ ರೂಲ್ 194ರ ಪ್ರಕಾರ ಈ ವಿಷಯದ ಬಗ್ಗೆ ಮೆನ್‌ಷನ್ ಮಾಡಬಹುದೆಂದು ತಾವು ಅವಕಾಶವನ್ನು ಕೊಟ್ಟಿದ್ದೀರಿ. ಮಾನ್ಯ ಹಿರಿಯ ಸಚಿವರಾದಂತಹ ಶ್ರೀ ರಂಗನಾಥ್‌ರವರ ವಾದ ಏನಿದೆ ಎಂದರೆ, ಈ ವಿಷಯ ಇವತ್ತಿನ ಅಜೆಂಡಾದಲ್ಲಿ ಬರಬೇಕಾಗಿತ್ತೆಂದು ವಾದ ಮಾಡುತ್ತಿದ್ದಾರೆ. ನನ್ನ ತಿಳುವಳಿಕೆಯ ಪ್ರಕಾರ ಅಜೆಂಡಾದಲ್ಲಿ ಯಾವಾಗ ಬರುತ್ತದೆ ಎಂದರೆ, ತಾವು ಮಾನ್ಯ ಸದಸ್ಯರು ಮೆನ್‌ಷನ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆಂದು ರೂಲಿಂಗ್ ಕೊಟ್ಟಿದ್ದೀರಿ. ಅವರು ಒಂದೆರಡು ನಿಮಿಷದಲ್ಲಿ ಸಂಬಂದಪಟ್ಟ ವಿಷಯವನ್ನು ಮೆನ್‌ಷನ್ ಮಾಡಬೇಕು, ಆಗ ತಾವು ಆಡ್ಮಿಟ್ ಮಾಡಿದಂತಹ ಸಂದರ್ಭದಲ್ಲಿ ಅದು ಅಜೆಂಡಾಕ್ಕೆ ಸೇರುತ್ತದೆ. ಮಾನ್ಯ ಸದಸ್ಯರ ಹಕ್ಕುಗಳು ಬಹಳ ಮುಖ್ಯವಾದುದು, ಆದ್ದರಿಂದ ಅಲ್ಲಿ ಏನು ನಡೆದಿದೆ ಎಂದರೆ...

ಅಧ್ಯಕ್ಷರು : ನೀವು ಕಾನೂನಿನ ಚೌಕಟ್ಟಿನೊಳಗಡೆ ಮಾತನಾಡಿ, ಮತ್ತೇ ನೀವು ಹಿಂದಿನಿಂದ ಚರ್ಚೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸದಸ್ಯರ ಹಕ್ಕುಚ್ಯುತಿ ಯಾವ ರೀತಿ ಆಗಿದೆ ಎಂಬುದನ್ನು ಹೇಳಿಕೊಳ್ಳುವುದಕ್ಕೆ ಇನ್ನು ಅವಕಾಶವನ್ನು ಕೊಟ್ಟಿಲ್ಲ. ಇಂತಹ ಸಂದರ್ಭ ಇರುವಾಗ ಹಕ್ಕುಚ್ಯುತಿಯ ಬಗ್ಗೆ ಹೇಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ? ತಾವು ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶವನ್ನು ಕೊಟ್ಟಿದ್ದೀರಿ. ಇವತ್ತಿನ ದಿವಸ ಏನಾಗಿದೆ ಅಂದರೆ ವಿರೋಧಪಕ್ಷದ ಸದಸ್ಯರಿಗೆ ಒಬ್ಬ ಅಧಿಕಾರಿಗೆ ಸಿಕ್ಕತಕ್ಕಂತಹ ಮರ್ಯಾದೆ ನಮಗೆ ಸಿಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ರಂಗನಾಥ್‌ರವರು ಏನು ಪಾಯಿಂಟ್ ಆಫ್ ಆರ್ಡರನ್ನು ಪ್ರಸ್ತಾಪ ಮಾಡಿದ್ದಾರೆಯೋ ಅದರ ಬಗ್ಗೆ ಮಾತ್ರ ಮಾತನಾಡಿ, ಮತ್ತೇ ನೀವು ಡಿಟೇಲಾಗಿ ಚರ್ಚೆ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಈಗ ಆಗುತ್ತಿರುವ ಚರ್ಚೆಯನ್ನು ಬರೆದುಕೊಳ್ಳಬೇಡಿ. ಮಾನ್ಯ ರಂಗನಾಥ್‌ರವರು ರೈಸ್

ನಾನು ಏನು ಹೇಳಿದೆನೆಂದರೆ, 195ರ ರೂಲ್ ಪ್ರಕಾರ ತಮಗೆ ಪ್ರಿವಿಲೇಜ್ ಮೋಷನ್ ಮೂವ್ ಮಾಡುವುದಕ್ಕೆ ಸದಸ್ಯರು ನೋಟಿಸನ್ನು ಕೊಡುತ್ತಾರೆ. ತಾವು ಅಪ್ಪಣೆಯನ್ನು ಕೊಟ್ಟಮೇಲೆ 192-193ರ ರೂಲ್ ಪ್ರಕಾರ ಚರ್ಚೆಗೆ ಅವಕಾಶವನ್ನು ಕೊಡುತ್ತೀರಿ. ತಾವು ಅವಕಾಶವನ್ನು ಕೊಟ್ಟಿದ್ದೇನೆಂದು ಹೇಳಿದ ತಕ್ಷಣ ಆ ಅಪಾದನೆ ಏನು ಎನ್ನುವುದು ನಮಗೆ ಬಂದರೆ, the very moment you give consent, the whole matter becomes, the property of this august House. ಈ ಸದನದಲ್ಲಿ ಚರ್ಚೆ ಮಾಡತಕ್ಕಂಥ ವಸ್ತುವಾಗುತ್ತದೆ. ಅದು ಏನು ಏನ್ನುವುದು ನಮಗೆ ಬರಬೇಕು. ಅದು ಏನು ಅನ್ನುವುದು ಇವತ್ತಿನ ಬಿಜಿನೆಸ್ ಅಜೆಂಡಾದಲ್ಲಿ ಬರಲಿಲ್ಲ, ನಾನು ಈ ಮಾತನ್ನು ಹೇಳುವುದು, ಮಾನ್ಯ ಸದಸ್ಯರ ಮನಸ್ಸನ್ನು ನೋವು ಮಾಡಬೇಕೆಂದು ನಾನು ಹೇಳಿರುವುದಿಲ್ಲ. ಅವರ ವಿಚಾರವನ್ನು ಪ್ರಸ್ತಾಪ ಮಾಡಿಸಬಾರದೆಂದು ಅಲ್ಲ, ಆ ತಪ್ಪು ಎಲ್ಲಿ ನಡೆದಿದೆ ಗೊತ್ತಿಲ್ಲ, ಆ ತಪ್ಪು ಆಗಬಾರದಾಗಿತ್ತು. ಅವರು ಏನು ಪ್ರಸ್ತಾಪ ಮಾಡುತ್ತಾರೆ, ಅದಕ್ಕಿಂತ ಹೊರಗಡೆ ಹೋಗತಕ್ಕಂಥದ್ದು ಕ್ರಾಸಿಂಗ್ ದಿ ಲಿಮಿಟ್ಸ್ ಅದು ಆದರೆ, ಅದನ್ನು ನಾವು ಇಲ್ಲಿ ಕುಳಿತುಕೊಂಡು ಕೇಳುವುದಕ್ಕಾಗುತ್ತದೆಯೇ? ಅದು ಚರ್ಚೆ ಆಗಬೇಕಾದರೆ ಅಜೆಂಡಾದಲ್ಲಿ ಬರಬೇಕಾಗಿತ್ತು, ಅದು ಬಂದಿರುವುದಿಲ್ಲ ಎನ್ನುವ ಮಾತನ್ನು ನಾನು ಹೇಳಿರುತ್ತೇನೆ. ಮಾನ್ಯ ಸದಸ್ಯರಿಗೆ ನಾನು ಅಡ್ಡಿ ಬರಬೇಕು, ಹಾಗೆ ಮಾಡಬೇಕು ಎನ್ನುವ ಮಾತಿನಲ್ಲಿ ನಾನು ಅಂದಿರುವುದಿಲ್ಲ. ಆ ದೃಷ್ಟಿ ನನ್ನದಲ್ಲ, ಆದರೆ ಈ ವಿಷಯ ಯಾವಾಗ ಬಂದಿತ್ತು ಎನ್ನುವುದು ನನಗೆ ಗೊತ್ತಿರಲಿಲ್ಲ. ಆದು ಒಂದು ವೇಳೆ ನನಗೆ ಗೊತ್ತಿದ್ದರೆ ಅದರ ಕೆಡೆಗೆ ನಾನು ಗಮನವನ್ನು ಕೊಡುತ್ತಿರಲಿಲ್ಲ. ನಾನು ಏಕೆ ತತ್‌ಕ್ಷಣ ಎದ್ದು ನಿಂತು ಹೇಳಿದೆ ಎಂದರೆ, ನಾನು ಮಾತನಾಡುವಾಗ ಮಾನ್ಯ ಸದಸ್ಯರು ಹೇಳುತ್ತಿದ್ದರು, ಜಿಲ್ಲಾ ಮಂತ್ರಿಗಳು ಹಾಗೆ ಹೀಗೆ ಎರಡು ಹೇಳುತ್ತಿರುವುದರಿಂದ, ಜಿಲ್ಲಾ ಮಂತ್ರಿಗಳ ಕೆಲಸ ಕಾರ್ಯಗಳ ಬಗ್ಗೆ ಇಲ್ಲಿ ಏಕೆ ಪ್ರಸ್ತಾಪವಾಗುತ್ತಿದೆ How can that become a matter of privilege under Section 191? ಎಂದು ಹೇಳಿ ನಾನು ವಿಚಾರವನ್ನು ಮಾಡಿ ಎದ್ದು ನಿಂತಿರುತ್ತೇನೆ. ನಾನು ಅಪ್ಪಣೆ ಕೊಟ್ಟಿದ್ದೇನೆಂದು ತಾವು ಹೇಳಿದಿರಿ, ಅದು ತಮ್ಮ ವಿವೇಚನೆಗೆ ಬಿಟ್ಟ ವಿಚಾರ. ಅದು ತಮಗೆ ಸರಿ ಎಂದರೆ, ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಅದು ತಮ್ಮ ವಿವೇಚನೆಗೆ ಸರಿ ಎಂದ ತಕ್ಷಣವೆ ಅದು ಏನು ಏನ್ನುವುದು ಈ ಸಭೆಯ ಮುಂದೆ ಬರಬೇಕು. ತಮ್ಮ ಅಫೀಸಿನಿಂದ ಅದನ್ನು ನಮಗೆ ಕಳುಹಿಸಿಕೊಡಬೇಕು. ಅದು ಇಲ್ಲದಿದ್ದರೆ ಅದನ್ನು ಚರ್ಚೆ ಮಾಡುವುದಕ್ಕೆ ಸರಿಹೋಗುವುದಿಲ್ಲ. ಅದು ತಪ್ಪಾಗುತ್ತದೆ, ಇದನ್ನು ಬಿಡಿಸಿ ಹೇಳುವುದಕ್ಕೆ ನನಗೆ ಮನಸ್ಸಾಗಿರಲಿಲ್ಲ, ಅದಕ್ಕಾಗಿ ಈಗ ಅದನ್ನು ನಾನು ಬಿಡಿಸಿ ಹೇಳತಕ್ಕಂಥ ಪರಿಸ್ಥಿತಿ ಬಂತು. ಅದನ್ನು ನಮ್ಮ ಅಫೀಸಿಗೆ ಕಳುಹಿಸಿಕೊಡಬೇಕಾಗಿತ್ತು, ಅದನ್ನು ಕಳಿಸಲಿಲ್ಲ.

ಅಧ್ಯಕ್ಷರು : ದಯಮಾಡಿ ಒಂದು ನಿಮಿಷ ಕೇಳಬೇಕು. ಮಾನ್ಯ ಭೈರೇಗೌಡರೆ ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಕನ್ಸೆಂಟ್ ಮತ್ತು ಪ್ರಿವಿಲೇಜ್ ಬಗ್ಗೆ ಲಿಗ್ಯಾಲಿಟಿ ಪ್ರಶ್ನೆಯನ್ನು ಮಾನ್ಯ ಅರಣ್ಯ ಸಚಿವರು ಎತ್ತಿರುತ್ತಾರೆ. ಅದರ ಬಗ್ಗೆ ನಾನು ರೂಲಿಂಗ್ ಕೊಡುತ್ತೇನೆ. ಆಮೇಲೆ ಈ ಪ್ರಶ್ನೆಯನ್ನು ನಾವು ತೆಗೆದುಕೊಳ್ಳೋಣ.

ಮಾಡಿರತಕ್ಕಂತಹ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತ್ರ ಮಾನ್ಯ ಸೋಮಶೇಖರ್‌ರವರೆ ಮಾತನಾಡಬೇಕು. ನೀವು ಮತ್ತೆ ಮೂಲಭೂತ ಪ್ರಶ್ನೆಗೆ ಹೋಗಬೇಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ತಾವು ಈ ಸಭೆಯ ಅಧ್ಯಕ್ಷರು, ಯಾವುದೇ ಒಂದು ಪಕ್ಷದ ಸದಸ್ಯರಿಗೆ ನೋವಾದಾಗ ಅದನ್ನು ತಮ್ಮ ಮುಂದೆ ಹೇಳಿಕೊಳ್ಳದೆ ಇನ್ನು ಯಾರ ಮುಂದೆ ಹೇಳಿಕೊಳ್ಳುವುದಕ್ಕೆ ಸಾಧ್ಯ? ಆದ್ದರಿಂದ ಈ ವಿಷಯವನ್ನು ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇವೆ. ಇವತ್ತಿನ ದಿವಸ ನಮ್ಮ ವಿರೋಧಪಕ್ಷದ ಸದಸ್ಯರ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮಲ್ಲಿ ಹಿರಿಯ ಸದಸ್ಯರಾಗಲಿ, ಇವತ್ತಿನ ದಿವಸ ಅಧಿಕಾರಿಗಳಿಗೆ ಸಿಗತಕ್ಕಂತಹ ಗೌರವ ಸರ್ಕಾರದಿಂದ ನಮಗೆ ಸಿಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೆ, ಪುನಃ ಪುನಃ ತಾವು ಮೂಲ ಪ್ರಶ್ನೆಗೆ ಬರುತ್ತಿದ್ದೀರಿ? I am very sorry.

ಶ್ರೀ ಬಿ. ಸೋಮಶೇಖರ್ : ಒಂದು ಉದಾಹರಣೆ ಹೇಳುತ್ತೇನೆ. ಮೈಸೂರಿಗೆ ಮಾನ್ಯ ಚೀಫ್ ಜಸ್ಟೀಸ್‌ರವರು ಹೋಗಿದ್ದಾಗ ಒಬ್ಬ ಅಧಿಕಾರಿಯು ಕೂಡ ಬಂದು ಅವರನ್ನು ಸ್ವಾಗತ ಮಾಡಲಿಲ್ಲ.

ಅಧ್ಯಕ್ಷರು : ಈ ವಿಷಯದ ಬಗ್ಗೆ ಮಾತನಾಡುವುದಕ್ಕೋಸ್ಕರ ಮಾನ್ಯ ಸುಬ್ಬಾರೆಡ್ಡಿಯವರು ನನಗೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. We are now talking of privilege of only members of the House, ಆ ಸಬ್ಜೆಕ್ಟ್ ಬಂದಾಗ ತಾವು ಸಹ ಮಾತನಾಡಿ, ಆದರೆ ಈಗ ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿ.

ಶ್ರೀ ಬಿ. ಸೋಮಶೇಖರ್ : ಅಲ್ಲಿ ವಿಭಾಗಾಧಿಕಾರಿಗಳನ್ನು ವರ್ಗಾವಣೆ ಮಾಡಿದ್ದು ಆಯಿತು. ಮತ್ತೆ ಒಂದು ಪಕ್ಷದ ಕಛೇರಿಯಲ್ಲಿ ಕಾರ್ಯಕರ್ತರು ಇರುವಾಗ ಒಬ್ಬ ಸಬ್‌ಇನ್ಸ್‌ಪೆಕ್ಟರ್‌ರವರನ್ನು ಅಮಾನತ್ತು ಮಾಡಿದ್ದಾರೆ. ಇವತ್ತು ಒಬ್ಬ ಶಾಸಕರಿಗೆ ಈ ಸಭೆಯನ್ನು ನಡೆಸಬಾರದು ಎಂದು ಹೇಳಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಮತ್ತೆ ನೀವು ಬೇರೆ ಪಾಯಿಂಟನ್ನು ತೆಗೆದುಕೊಂಡು ಚರ್ಚೆ ಮಾಡುತ್ತಿದ್ದೀರಿ. ನೀವ ಯೀಲ್ಡ್ ಆಗಿ, ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಶಾಸಕರಾಗಿರತ್ಕಂತಹ ನಮಗೆ ಇಲ್ಲಿ ಗೌರವವಿಲ್ಲ, ಆದ್ದರಿಂದ ತಾವು ನಮಗೆ ರಕ್ಷಣೆಯನ್ನು ಕೊಡಬೇಕು. ಇದಕ್ಕೆ ಅವಕಾಶವನ್ನು ಮಾಡಿಕೊಡಿ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಸಚಿವರಾದಂತಹ ಮಾನ್ಯ ಕೆ.ಹೆಚ್. ರಂಗನಾಥ್ ರವರು ಎತ್ತಿರತಕ್ಕಂತಹ ವಿಚಾರದಲ್ಲಿ ತಿರುಳಿದೆ. ನಾನು ಇಲ್ಲವೆಂದು ಅದನ್ನು ಅಲ್ಲಗೆಳೆಯುವುದಕ್ಕೆ ಹೋಗುವುದಿಲ್ಲ. ಖಂಡಿತವಾಗಿಯೂ ತಾವು ಹೇಳಿತರತಕ್ಕಂಥದ್ದು

ಸ್ಥಾನದಲ್ಲಿ ಕುಳಿತುಕೊಂಡಿದ್ದರು, ಆಗ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದರು, ಒಂದು ಲ್ಯಾಂಡ್ ಟ್ರಿಬ್ಯೂನಲ್ ಮೆಂಬರ್‌ಗೋಸ್ಕರ ಎಷ್ಟೊಂದು ಹೋರಾಟವಾಗಿದೆ ಎನ್ನುವುದು ನಮಗೆ ಗೊತ್ತಿದೆ. ಅದನ್ನೆಲ್ಲವನ್ನು ಇವತ್ತು ನಾವು ಮರೆತಿದ್ದೇವೆ. ಇವತ್ತು ಆಶ್ರಯ ಸಮಿತಿಯ ಅಧ್ಯಕ್ಷರು ನಾವು, ಬಗರ್ ಹುಕುಂ ಸಾಗುವಳಿಯ ಅಧ್ಯಕ್ಷರು ನಾವು, ಆದರೆ ಅಧ್ಯಕ್ಷರ ಮಾತಿಗೆ ಎಷ್ಟು ಬೆಲೆ ಇದೆ. ಇವತ್ತು ವ್ಯವಸ್ಥೆ ಬದಲಾವಣೆಯಾಗುತ್ತಿದೆ, ನಾವು ಕೂಡ ಆ ಕಡೆ ಕುಳಿತುಕೊಂಡಾಗ ಅದನ್ನೇ ಮಾಡಿರುತ್ತೇವೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅದನ್ನು ಬಿಟ್ಟು ನೀವು ಆಡಳಿತಶಾಹಿಗೆ ನೀವು ಹೆಚ್ಚಿನ ಅಧಿಕಾರವನ್ನು ಕೊಡಬೇಕು ಎನ್ನುವುದಾದಲ್ಲಿ ಇದು ಸರ್ಕಾರಕ್ಕೆ ಗೌರವವನ್ನು ತರತಕ್ಕಂಥದ್ದಲ್ಲ. ನಾನು ಕೊನೆಯದಾಗಿ ಮಾನ್ಯ ಅರಣ್ಯ ಸಚಿವರ ಪಾಯಿಂಟ್ ಆಫ್ ಆರ್ಡರ್‌ಗೆ ನಾನು ಉತ್ತರವನ್ನು ಕೊಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ನನಗೆ ಪಾಯಿಂಟ್ ಆಫ್ ಆರ್ಡರ್ ಕೇಳುವ ಅಧಿಕಾರ ಇಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಮಗೆ ಪಾಯಿಂಟ್ ಆಫ್ ಆರ್ಡರ್ ಕೇಳುವ ಅಧಿಕಾರ ಇಲ್ಲದೆ ಇನ್ನಾರಿಗಿದೆ. ನಾನು ಯೀಲ್ಡ್ ಆಗಿರುವುದಿಲ್ಲ. ನಾನು ಯೀಲ್ಡ್ ಆದ ನಂತರ ತಾವು ಮಾಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು xxx ಮಾಡಿಕೊಂಡಿದ್ದೀರೆಂದು ಹೇಳಿದರೆ ಏನು ಅರ್ಥ? It should not go into the record.

MR. SPEAKER : Remove that word - "Congress Kacheri".

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆಯಿತು, ಹಾಗಾದರೆ xxx ಎನ್ನುವುದನ್ನು ತೆಗೆದು ಹಾಕಿ.xxx ಮಾಡಿಕೊಳ್ಳುವುದಿಲ್ಲವೆಂದರೆ ತಾವು ಇಲ್ಲವೆಂದು ಹೇಳಿಬಿಡಿ. ಆ ಶಬ್ದ ಅಸಂಸ್ಕೃತಿ ಎನ್ನುವುದಾದರೆ ತೆಗೆದು ಹಾಕಬಹುದು. ಅದಕ್ಕೆ ನನ್ನ ತಕರಾರು ಏನಿಲ್ಲ.

ಅಧ್ಯಕ್ಷರು : ಆ ಶಬ್ದವನ್ನು ತೆಗೆದುಹಾಕಿಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಕೆ.ಹೆಚ್. ರಂಗನಾಥರವರು ಹೇಳಿದ ಮಾತಿನಲ್ಲಿ ತಿರಿಳಿದೆ. ಆದರೆ ತಾವು ವಿರೋಧ ಪಕ್ಷದ ಶಾಸಕರ ಭಾವನೆಗಳನ್ನು ಅರ್ಥಮಾಡಿಕೊಂಡು, ಈ ವಿಚಾರದಲ್ಲಿ ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ, ಕೇವಲ ಎರಡು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ತಮಗೂ ಮತ್ತು ಸದನದ ಸದಸ್ಯರಿಗೆ ಅರ್ಥವಾಗಲಿಲ್ಲ, I have not made myself clear ಎನ್ನುವ ಭಾವನೆ ನನಗೆ ಬಂದಿರುತ್ತದೆ.

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅವರು ಲಿಗ್ಯಾಲಿಟಿ ಪ್ರಶ್ನೆಯನ್ನು ರೇಸ್ ಮಾಡಿರುವಾಗ ಅದು ಪ್ರಿವಿಲೇಜ್ ಆಗುತ್ತದೆ ಇಲ್ಲವೋ ಎನ್ನುವುದು I will give a ruling.

(ಗೊಂದಲ)

SRI A. RAMADAS : Already you have allowed.

MR. SPEAKER : I must give a ruling. Afterwards we will take up, on the point of order raised by Mr. K.H. Ranganath. ಅದನ್ನು ನಾನು ಎಗ್ಸಾಮಿನ್ ಮಾಡಬೇಕು. We will take it up afterwards.

(Interruptions)

MR. SPEAKER : Please resume your seats.

ಶ್ರೀ ಎ. ರಾಮದಾಸ್ : ಅಧ್ಯಕ್ಷರೇ, ತಾವು ರೂಲಿಂಗ್ ಕೊಡಿ.

ಅಧ್ಯಕ್ಷರು : ರೂಲಿಂಗ್ ಈಗ ನಾನು ಕೊಡುವುದಿಲ್ಲ ಆಮೇಲೆ ರೂಲಿಂಗ್ ಕೊಡುತ್ತೇನೆ. I have to refer number of records, number of decisions of Lok Sabha and other records. I will give a ruling ನಾನು ಎದ್ದುನಿಂತಿರುವಾಗ ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರು ಎದ್ದು ನಿಂತಿರುವಾಗ ಎಲ್ಲರೂ ಕುಳಿತುಕೊಳ್ಳಬೇಕು, ಮಾನ್ಯ ಅಧ್ಯಕ್ಷರೆ ಗೌರವ ಇಲ್ಲವೇ?

ಅಧ್ಯಕ್ಷರು : ಅವರು ಲೀಗಲ್ ಕ್ವೆಶ್ಚನ್ ರೇಸ್ ಮಾಡಿದ್ದಾರೆ, I must give my ruling. ತಾವು ದಯವಿಟ್ಟು ಕ್ಷಮಿಸಬೇಕು.

ಒಬ್ಬ ಮಾನ್ಯ ಸದಸ್ಯರು : ತಾವು ರೂಲಿಂಗನ್ನು ಆಮೇಲೆ ಕೊಡಿ.

ಅಧ್ಯಕ್ಷರು : ಅವರ ಪಾಯಿಂಟ್ ಆಫ್ ಆರ್ಡರ್ ಮೇಲೆ ಸುಮಾರು 8-10 ಜನ ಸದಸ್ಯರು ಮಾತನಾಡಿದ್ದಾರೆ. Further there is no question of leaving.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ತಾವು ಅವಕಾಶವನ್ನು ಕೊಟ್ಟಿರುತ್ತೀರಿ 10 ನಿಮಿಷ ಸಮಯಾವಕಾಶವನ್ನು ಅವರಿಗೆ ಕೊಡಿ, ಅವರು ಮಾತನಾಡಿ ಮುಗಿಸುತ್ತಾರೆ.

ಅಧ್ಯಕ್ಷರು : ಈಗಾಗಲೇ ಮಾನ್ಯ ಜಗದೀಶ್ ಶೆಟ್ಟರ್, ಬಿ. ಸೋಮಶೇಖರ್ ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದಾಗ ಮಾತನಾಡಿದ್ದಾರೆ, ಹಾಗಾದರೆ ನಾವು ಎಲ್ಲರನ್ನು

ಮಾಡಿಕೊಂಡಿದ್ದೇವೆ. ಇವತ್ತಿನ ದಿವಸ ಯಾವುದೇ ಸರ್ಕಾರವಿರಬಹುದು, ಸರ್ಕಾರಿ ಆಜ್ಞೆಗಳನ್ನು ಪರಿಪಾಲನೆ ಮಾಡದೆ ಇದ್ದಾಗ ನಾವು ಇದನ್ನು ಪ್ರಿವಿಲೇಜ್ ಎನ್ನದೆ ಬೇರೆ ಏನು ಹೇಳಬೇಕು. ಸರ್ಕಾರಿ ಆಜ್ಞೆಗಳನ್ನು ಸರ್ಕಾರಿ ನೌಕರರು ಪಾಲನೆ ಮಾಡದೆ ಇದ್ದರೆ ಅದು ಹಕ್ಕುಚ್ಯುತಿ ಆಗದೆ ಬೇರೆ ಏನಾಗುವುದಕ್ಕೆ ಸಾಧ್ಯ? ಇದು ನನ್ನ ಮುಖ್ಯ ಪ್ರಶ್ನೆಯಾಗಿದೆ, ಇದು ನಾನು ಪ್ರಸ್ತಾಪ ಮಾಡಿರತಕ್ಕಂತಹ ಕ್ರಿಯಾಲೋಪ. ಈಗ ನಾವೆಲ್ಲಾ ಏನು ಕೇಳುತ್ತಾ ಇದ್ದೇವೆಂದರೆ, ನಮ್ಮ ಹಕ್ಕಿಗೆ ಏನು ಚ್ಯುತಿ ಬಂದಿದೆ ಎಂದರೆ ಸರ್ಕಾರ ಮಾಡಿರತಕ್ಕಂತಹ ಆಜ್ಞೆಗಳ ಪರವಾಗಿ ಕೆಲಸ ಮಾಡುತ್ತಿಲ್ಲ. ಶಾಸಕರನ್ನು ನಾವು ಕರೆಯುವುದಿಲ್ಲ, ಮಂತ್ರಿಗಳು ಹಾಗೂ ಆಡಳಿತ ಪಕ್ಷದ ಸದಸ್ಯರನ್ನು ಸೇರಿಸಿಕೊಂಡು ಮಾಡಿಕೊಳ್ಳುವುದಾದರೆ ಸರ್ಕಾರಿ ಆಜ್ಞೆಗಳನ್ನು ವಾಪಸ್ಸು ತೆಗೆದುಕೊಳ್ಳಿ. ಇವತ್ತಿನ ದಿವಸ ಈ ರಾಜ್ಯದ ಮುಖ್ಯ ನ್ಯಾಯಾಧೀಶರಿಗೆ ಅವಮಾನವಾಗಿದೆ ಮತ್ತು ಮೈಸೂರಿನಲ್ಲಿ ಆಡಳಿತ ಪಕ್ಷದ ಶಾಸಕರಿಗೆ ಬಟ್ಟೆ ಬಿಚ್ಚಿ ಬೆತ್ತಲೆ ಮಾಡಿ ಹೊಡಿದ್ದಾರೆ. ಹಾಗೆಯೇ ಸಬ್‌ಇನ್ಸ್‌ಪೆಕ್ಟರ್‌ರವರನ್ನು ಸಸ್ಪೆಂಡ್ ಮಾಡಿದ್ದಾರೆ. ಜಿಲ್ಲಾ ಮಂತ್ರಿಗಳು ಮಾಡಿಲ್ಲ, ಅಧಿಕಾರಿಗಳು ಅವಮಾನ ಮಾಡಿದ್ದಾರೆಂದು ಮಾನ್ಯ ಕೃಷ್ಣಮೂರ್ತಿಯವರು ಹೇಳುತ್ತಿದ್ದಾರೆ. ಇದನ್ನು ಸಹ ನೀವು ಚರ್ಚೆ ಮಾಡದಿದ್ದರೆ ಮತ್ತೇನು ಚರ್ಚೆ ಮಾಡುತ್ತೀರಾ? ಇವತ್ತಿನ ದಿವಸ ರೈತರ ಬಗ್ಗೆ ಮತ್ತು ಡಾ. ರಾಜಕುಮಾರ್ ಅಪಹರಣದ ವಿಷಯಕ್ಕೆ ಸಂಬಂಧಪಟ್ಟಂತೆ ಹಾಗೂ ಕೆಲವೊಂದು ವಿಷಯಗಳ ಬಗ್ಗೆ ಸರ್ಕಾರಕ್ಕೆ ನಾವು ಸಹ ಸಹಕಾರವನ್ನು ಕೊಟ್ಟಿದ್ದೇವೆ. ಹಾಗೆಯೇ ಮುಂದೆಯೂ ಸಹ ಸರ್ಕಾರಕ್ಕೆ ಸಹಕಾರವನ್ನು ಕೊಡುತ್ತೇವೆ. ನಿಮಗೆ ಬಹುಮತ ಇದೆ ಎನ್ನುವ ಒಂದೇ ಕಾರಣದಿಂದ ಆಡಳಿತ ಪಕ್ಷದವರಾದ ನಮಗೆ ಆನೆ ಬಲ ಇದೆ, ಕಾನೂನಿನ ಪುಸ್ತಕ ಇದೆ, ನಾವು ಏನು ಬೇಕಾದರೂ ಮಾಡಬಹುದು ಎನ್ನತಕ್ಕ ಧೋರಣೆ ಇದ್ದರೆ, ದಯಮಾಡಿ ಆಡಳಿತ ಪಕ್ಷದವರು ಮತ್ತು ವಿಶೇಷವಾಗಿ ಹಿರಿಯರಾದಂಥವರು ಹೊಸದಾಗಿ ಬಂದಿರತಕ್ಕಂಥ ಶಾಸಕರಿಗೆ ತಿಳಿಸಬೇಕಾಗುತ್ತದೆ. ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಇದರ ಬಗ್ಗೆ ಚರ್ಚೆಯಾಗಲಿ, ಅದರಲ್ಲಿ ಏನಿದೆ? 10 ನಿಮಿಷ ಕಾಲಾವಕಾಶವನ್ನು ಕೊಡಿ, ಅಲ್ಲಿ ನಡೆದಿರತಕ್ಕಂತಹ ಶ್ರೀ ಗುರುಸ್ವಾಮಿಯವರ ಘಟನೆ, ಶ್ರೀ ಕೃಷ್ಣಮೂರ್ತಿಯವರು ಘಟನೆ ಬಗ್ಗೆ ಚರ್ಚೆಯನ್ನು ಮಾಡದೇ ಹೋದರೆ ಏನಾಗುತ್ತದೆ, ಅಧಿಕಾರಿಗಳು ಏನು ತಿಳಿದುಕೊಳ್ಳುತ್ತಾರೆ, ಅವರು ನಮ್ಮನ್ನು ಏನು ಮಾಡಿಕೊಂಡರು ಎನ್ನುವ ಭಾವನೆ ಅವರಿಗೆ ಬರುತ್ತದೆ. ಈ ಸದನವನ್ನು ನೋಡತಕ್ಕಂತಹ ಜನ, ಹೊರಗಡೆ ಇರತಕ್ಕಂಥ ಜನ, ಈ ಸದನದಲ್ಲಿ ಆಗತಕ್ಕಂಥ ಚರ್ಚೆಗೆ ಗೌರವವನ್ನು ಕೊಡಬೇಕೆಂದು ಹೇಳಿದರೆ, ಇಲ್ಲಿರುವ ಪ್ರತಿಯೊಬ್ಬ ನೌಕರನಿಗೂ ಅವಮಾನವಾಗಬೇಕೆಂದು ನಾನು ಹೇಳುವುದಿಲ್ಲ. ತಾವು ಇವತ್ತು ರೂಲಿಂಗನ್ನು ಕೊಡಿ, ಅಥವಾ ಸರ್ಕಾರದವರು ಹೇಳಲಿ, ಈ ರೀತಿ ನೀತಿ, ರಿವಾಜುಗಳನ್ನು ಹಾಗೂ ಸರ್ಕಾರಿ ಆದೇಶಗಳನ್ನು ವಾಪಸ್ಸು ತೆಗೆದುಕೊಂಡಿರುತ್ತೇವೆ. ನಮಗೆ ಇಷ್ಟ ಬಂದ ಹಾಗೆ ನಾವು ಮಾಡಿಕೊಳ್ಳುತ್ತೇವೆ. [xxx] ಹಾಗೆ ನಾವು ಮಾಡಿಕೊಳ್ಳುತ್ತೇವೆ ಎನ್ನುವುದಾದರೆ ಅದಕ್ಕೆ ನಮ್ಮ ತಕರಾರು ಏನಿಲ್ಲ. ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿರಬಹುದು, ಇದೇ ಸದನದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಆಗ ಈ ಕಡೆ ಕುಳಿತುಕೊಂಡಿದ್ದರು, ಆಗ ಬೈರೇಗೌಡರು ಆಡಳಿತ ಪಕ್ಷದ

---

xxx ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದವನ್ನು ಕಡತದಿಂದ ತೆಗೆದು ಹಾಕಲಾಗಿದೆ.

ನಿಯಮಾವಳಿಯ ಪುಸ್ತಕದಲ್ಲಿ ಇದೆ. ಇದನ್ನು ಈ ಸದನವೆ ರಚನೆ ಮಾಡಿಕೊಂಡಿರುವುದರಿಂದ ಅದರ ಪ್ರಕಾರವೆ ನಾವು ನಡೆದುಕೊಳ್ಳಬೇಕಾಗುತ್ತದೆ. ಹಾಗೂ ತಲೆಬಾಗಬೇಕಾಗುತ್ತದೆ, ಮೊನ್ನೇ ದಿವಸ ಸಂತೆಮಾರಹಳ್ಳಿ ಕ್ಷೇತ್ರದ ಶಾಸಕರಾಗಿರತಕ್ಕಂತಹ ಶ್ರೀಮಾನ್ ಎ.ಆರ್. ಕೃಷ್ಣಮೂರ್ತಿಯವರು ಈ ಒಂದು ವಿಷಯವನ್ನು ಬಹಳ ನೊಂದ ಮನಸ್ಸಿನಿಂದ ಪ್ರಸ್ತಾಪ ಮಾಡಿದರು. ಸಭಾನಾಯಕರ ಗೈರು ಹಾಜರಿಯಲ್ಲಿ ಮಾನ್ಯ ಗೃಹಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟರು, ಅದೇನೆಂದರೆ, ತಾವು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಸಚಿವರು ಹಾಗೂ ವಿರೋಧಪಕ್ಷದ ನಾಯಕರು ಮತ್ತು ಸಂಬಂಧಪಟ್ಟ ಶಾಸಕರು ಕುಳಿತು ಇದರ ಬಗ್ಗೆ ಚರ್ಚೆ ಮಾಡಬೇಕೆಂಬುದರ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದೆವು. ಈಗ ವಾಸ್ತವಾಂಶದಲ್ಲಿ ನಾನು ಯಾವುದೇ ಘಟನೆಗಳ ಬಗ್ಗೆ ಹೇಳುವುದಕ್ಕೆ ಹೋದರೆ, ತಾವು ಅವಕಾಶವನ್ನು ಕೊಡುವುದಿಲ್ಲವೆಂದು ಈಗಾಗಲೇ ಹೇಳಿದ್ದೀರಿ.

ಅಧ್ಯಕ್ಷರು : ಘಟನೆಗಳ ಬಗ್ಗೆ ಮತ್ತೆ ಇಲ್ಲಿ ವಿವರಣೆ ಮಾಡಬೇಡಿ.

ಶ್ರೀ ಪಿ.ಜಿ.ಆರ್. ಸಿಂದ್ಯಾ : ತಾವು ವಿರೋಧಪಕ್ಷದವರ ಬಗ್ಗೆ ಇಷ್ಟೊಂದು ಕಠಿಣವಾಗಿ ನಡೆದುಕೊಂಡರೆ ನಮಗೆ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇವತ್ತು ಅನೇಕ ಘಟನಾವಳಿಗಳು ನಡೆದಿದ್ದು, ವಿರೋಧಪಕ್ಷದ ಶಾಸಕರಿಗಿಂತ ಆಡಳಿತ ಪಕ್ಷದ ಶಾಸಕರಿಗೆ ಬಹಳ ನೋವಿದೆ. ಇದು ಈ ಸಭೆಗೆ ಮತ್ತು ರಾಜ್ಯಕ್ಕೆ ಗೌರವವನ್ನು ಹೆಚ್ಚು ಮಾಡತಕ್ಕಂತಹದರಲ್ಲಿ ಇದು ಯಾವುದೂ ಸರಿಯಲ್ಲ. ಇದನ್ನು ಸರ್ಕಾರ ಅರ್ಥಮಾಡಿಕೊಂಡಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ತಾವು ಎಲ್ಲದರಲ್ಲೂ ಸಹಕಾರವನ್ನು ಕೊಡುತ್ತೇವೆಂದು ಹೇಳಿ ಒಬ್ಬ ಅಧಿಕಾರಿಯಿಂದ ಅವಮಾನಮಾಡತಕ್ಕಂಥದ್ದು ಸರಿ ಎಂದು ಸರ್ಕಾರ ತಿಳಿದುಕೊಂಡರೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ನಾನು ಮಾತನಾಡುವುದಕ್ಕೆ ಆಡಳಿತ ಪಕ್ಷದ ಕಡೆಯವರು ಅವಕಾಶವನ್ನು ಕೊಡಬೇಕು. ಏಕೆಂದರೆ, ಮಾನ್ಯ ರಂಗನಾಥ್‌ರವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾವು ಯಾರು ಎದ್ದುನಿಂತುಕೊಂಡು ಅವರಿಗೆ ತೊಂದರೆಯನ್ನು ಕೊಟ್ಟಿಲ್ಲ. ಹಾಗೆಯೇ ಮಾನ್ಯ ಕರಿಯಣ್ಣನವರು ಮಾತನಾಡಿದಾಗಲೂ ಸಹ ನಾವು ಕುಳಿತುಕೊಂಡು ಕೇಳಿದ್ದೇವೆ. ಆದ್ದರಿಂದ ನಾವು ಮಾತನಾಡತಕ್ಕಂತಹ ಸಂದರ್ಭದಲ್ಲಿ ಅವರು ಕುಳಿತುಕೊಂಡು ಕೇಳತಕ್ಕಂತಹ ಸೌಜನ್ಯ, ಮುತ್ಸದ್ದಿತನವನ್ನು ಅವರು ತೋರಿಸಬೇಕು. ಮಾನ್ಯ ಸಭಾಧ್ಯಕ್ಷರು, ವಿರೋಧಪಕ್ಷದಲ್ಲಿರತಕ್ಕಂತಹ ಸದಸ್ಯರ ಭಾವನೆಯನ್ನು ಅರ್ಥಮಾಡಿಕೊಳ್ಳಬೇಕು. ಈಗ ಮಾನ್ಯ ಸದಸ್ಯರು ತಂದಿರತಕ್ಕಂತಹ ಈ ವಿಷಯದಲ್ಲಿ ಮಂತ್ರಿಗಳೆಂದು ಅವರು ಹೇಳಲೇ ಇಲ್ಲ, ಜಿಲ್ಲಾ ಮಂತ್ರಿಗಳು ಆ ಕಾರ್ಯಕ್ರಮಕ್ಕೆ ಬಂದಿದ್ದರು ಎನ್ನತಕ್ಕಂತದ್ದನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಜಿಲ್ಲಾ ಮಂತ್ರಿಗಳಿಂದ ಹಕ್ಕುಚ್ಯುತಿಯಾಗಿದೆ ಎಂದು ಎಲ್ಲಿಯೂ ಸಹ ಮಾನ್ಯ ಸದಸ್ಯರು ಹೇಳಿಲ್ಲ. ಅದಕ್ಕಿಂತ ಮುಖ್ಯವಾಗಿ ಮಾನ್ಯ ಕೃಷ್ಣಮೂರ್ತಿಯವರು ಏನು ಪ್ರಸ್ತಾಪ ಮಾಡಿದ್ದಾರೆಂದರೆ, ಅಧಿಕಾರಿಗಳು ಯಾವ ರೀತಿ ನಡವಳಿಕೆಗಳನ್ನು ಮಾಡಿಕೊಂಡಿದ್ದಾರೆಂದು ಎನ್ನತಕ್ಕಂಥದನ್ನು ಎತ್ತಿ ಹಿಡಿದಿದ್ದಾರೆ. ಈಗ ನೀವು ಸಹಿತ ನಿಯಮಾವಳಿಗಳನ್ನು ರದ್ದುಮಾಡತಕ್ಕಂತಹ ಹಕ್ಕು ನಿಮಗೆ ಇದೆ. ಇದನ್ನು ರದ್ದು ಮಾಡಿ ಯಾವುದಕ್ಕೆ ಎಷ್ಟು ಸಮಯವಾದರೂ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ವಿರೋಧಪಕ್ಷದ ನಾಯಕರು ಮತ್ತು ನಾವು ಈ ವಿಷಯದ ಬಗ್ಗೆ ತಮ್ಮ ಮುಂದೆ ಹಲವಾರು ಬಾರಿ ಪ್ರಸ್ತಾಪ ಮಾಡಿ, ಇದನ್ನು ಸರಿ ಮಾಡಬೇಕೆಂದು ಮನವಿಯನ್ನು

ಕೇಳಬೇಕಾಗುತ್ತದೆ. ದಯಮಾಡಿ ಅವರ ವಿಷಯದ ಮೇಲೆ ರೂಲಿಂಗ್ ಕೊಟ್ಟು ಆಮೇಲೆ ಈ ವಿಷಯವನ್ನು ತೆಗೆದುಕೊಳ್ಳೋಣ. ಈಗ ಸಭೆಯ ಮುಕ್ತಾಯಗೊಂಡು ಪುನಃ 3 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು ಮಧ್ಯಾಹ್ನ 1.48 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ
ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳುವುದು)

(ಸಭೆಯು 3.40 ಗಂಟೆಗೆ ಪುನರ್ ಸಮಾವೇಶಗೊಂಡಿತು)

ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಂ.ವಿ. **ವೆಂಕಟಪ್ಪನವರು** ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು).

ಅಧ್ಯಕ್ಷರು : ಮಾನ್ಯ ಗುರುಸ್ವಾಮಿಯವರೇ, ನಾನು ಈ ಪ್ರಸ್ತಾವಕ್ಕೆ ಕನ್‌ಸೆಂಟ್ ಕೊಟ್ಟಿಲ್ಲ. ಕನ್‌ಸೆಂಟ್ ಕೊಟ್ಟಾದ ಮೇಲೆ ನಿಗಧಿತ ಫಾರ್ಮಾಲಿಟೀಸ್‌ಗಳು ಇವೆ. ಈಗ ತಾವುಗಳು ತಮ್ಮ ಮಾತುಗಳನ್ನು ಮೂರು ನಿಮಿಷಗಳಲ್ಲಿ ಮುಗಿಸಿ.

+ ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ಈ ಸದನದ ಒಬ್ಬ ಸದಸ್ಯರ ಹಕ್ಕು ಚ್ಯುತಿಯಾಗಿರುವ ಬಗ್ಗೆ ತಮ್ಮ ಅಪ್ಪಣೆ ಮೇರೆಗೆ ಇಲ್ಲಿ ಚರ್ಚೆ ಪ್ರಾರಂಭವಾಗಿದೆ. ಈ ಪ್ರಸ್ತಾಪದ ಮೂಲಕ ನಾನು ಪ್ರಚಾರವನ್ನು ತೆಗೆದುಕೊಂಡು ಅಥವಾ ಸದನದ ಕಾಲಹರಣವನ್ನು ಮಾಡುವುದು ನನ್ನ ಉದ್ದೇಶವಲ್ಲ. ಒಬ್ಬ ಶಾಸಕನ ಹಕ್ಕುಭಾದ್ಯತೆಗಳು ಯಾವುವು? ಅವರಿಗೆ ಯಾವ ರೀತಿಯಲ್ಲಿ ನಿಗದಿತ ಗೌರವಗಳು ಸಲ್ಲಬೇಕು, ಶಾಸಕರಿಗೆ ನಿಗದಿ ಮಾಡಲ್ಪಟ್ಟ ಹಕ್ಕುಗಳನ್ನು ಅವರ ಅವಧಿಯಲ್ಲಿ ನಿರ್ವಹಿಸಲಿಕ್ಕೆ ಯಾವುದೇ ಅಡೆತಡೆಗಳು ಬರಬಾರದು ಎಂಬ ದೃಷ್ಟಿಯಿಂದ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಚ್ಚಿಸಿದ್ದೇನೆ. ನನ್ನ ಕ್ಷೇತ್ರದಲ್ಲಿ ಕಳೆದ ಮಾರ್ಚ್ ತಿಂಗಳಲ್ಲಿ ಒಂದು ಬೈಪಾಸ್ ರಸ್ತೆಯನ್ನು ಪ್ರಾರಂಭ ಮಾಡಿದಾಗ ಶಾಸಕನಾದ ನನ್ನನ್ನು ಕಡೆಗಣಿಸಿ ನನ್ನ ಗಮನಕ್ಕೆ ಬಾರದ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿಕೊಂಡು ಆಮಂತ್ರಣ ಪತ್ರಿಕೆಯಲ್ಲಿಯೂ ಕೂಡ ನನ್ನ ಹೆಸರನ್ನು ನಮೂದಿಸದೇನೇ ಸಮಾರಂಭವನ್ನು ಮಾಡಿದಂಥ ಸಂದರ್ಭದಲ್ಲಿ ನಾನು ನಮ್ಮ ಜಿಲ್ಲಾ ಮಂತ್ರಿಗಳ ಸಮ್ಮುಖದಲ್ಲಿ ಒಂದು ಪ್ರತಿಭಟನೆಯನ್ನು ಮಾಡಿದೆ. ತದನಂತರ ನನ್ನ ಹಕ್ಕನ್ನು ಹೀಗೆ ಮೊಟಕು ಮಾಡುತ್ತಿರುವ ಬಗ್ಗೆ ಮತ್ತು ನನಗೆ ತೊಂದರೆಯಾಗುತ್ತಿರುವ ಬಗ್ಗೆ ತಮಗೂ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರಿಗೂ ನನ್ನ ಕಷ್ಟಗಳನ್ನು ನಿವೇದನೆ ಮಾಡಿಕೊಂಡಿದ್ದೆನು. ಈ ಸದನದಲ್ಲಿಯೂ ಕೂಡ ಪ್ರಶ್ನೆಯನ್ನು ಎತ್ತುರ ಮೂಲಕ ಜಿಲ್ಲಾ ಮಂತ್ರಿಗಳ ಕಾರ್ಯ ವ್ಯಾಪ್ತಿ ಏನು? ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸುವ ಮೂಲಕ ಕೊಟ್ಟಿದ್ದಾರೆ. ಅದರಲ್ಲಿ ಜಿಲ್ಲಾ ಮಂತ್ರಿಗಳ ಪಾತ್ರ, ಕೆಡಿಪಿ ಮೀಟಿಂಗ್ ಮತ್ತು 20 ಅಂಶಗಳ ಪ್ರೋಗ್ರಾಂನ ಬಗ್ಗೆ ರಿವ್ಯೂ ಮಾಡತಕ್ಕಂಥಾದ್ದಕ್ಕೆ ಸೀಮಿತವಾಗಿ ಅವರ ಕೆಲಸ ಇರತಕ್ಕಂಥಾದ್ದು ಎಂಬ ಉತ್ತರವನ್ನು ಶಾಸನ ಸಭೆಯಲ್ಲಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಕೂಡ ಬರೆದಿದ್ದಾರೆ. ಅದರ ಪ್ರಕಾರ...

ಅಧ್ಯಕ್ಷರು : ತಾವುಗಳು ವಿವರಕ್ಕೆ ಹೋಗಬೇಡಿ. ಕೇವಲ ಸಾರಾಂಶವನ್ನು ಮಾತ್ರ ಹೇಳಿದರೆ ಸಾಕು.

ಶ್ರೀ ಸಿ. ಗುರುಸ್ವಾಮಿ : "ತಮ್ಮ ಕೋರಿಕೆಯಂತೆ ಶಿಷ್ಟಾಚಾರಗಳನ್ನು ಪಾಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇವರಿಗೆ ಸಲ್ಲಿಸಿದ್ದೇನೆ. ಇದು ನನಗೆ ಮಾನ್ಯ ಮುಖ್ಯಮಂತ್ರಿಯವರಿಂದ ಬಂದ ಉತ್ತರ. ಇದು ಬಂದ ನಂತರ ನಮ್ಮ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಜಿಲ್ಲಾ ಮಂತ್ರಿ ಶ್ರೀ ಮಹದೇವ್‌ರವರ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಹೊಸ ಜಿಲ್ಲೆಯ ಅಭಿವೃದ್ಧಿಗೋಸ್ಕರ ಕೈಜೋಡಿಸಿಕೊಂಡು ಮುನ್ನೆಡೆಯುವ ಪ್ರಯತ್ನವನ್ನು ಮಾಡಿದ್ದೇನೆ. ಆದರೆ ನನಗೆ ಅವರ ವರ್ತನೆಯಲ್ಲಿ ಮಾತ್ರ ಯಾವ ಬದಲಾವಣೆ ಕಾಣಲಿಲ್ಲ. ಹಿಂದಿನ ರೀತಿಯಲ್ಲಿ ಮತ್ತೆ ಪುನರಾರ್ವತನೆ ನಡೆಯುತ್ತಿತ್ತು. ಚಾಮರಾಜನಗರದ ಚಾಮರಾಜೇಶ್ವರ.....

ಶ್ರೀ ಎಂ. ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು) : ಅಲ್ಲಿ ಮೊದಲು ಯಾವ ವರ್ತನೆ ಇತ್ತು, ಈಗ ಯಾವ ವರ್ತನೆ ಇದೆ ಎಂಬುದನ್ನು ಹೇಳಿ....

ಶ್ರೀ ಸಿ. ಗುರುಸ್ವಾಮಿ : ಮಾರ್ಚ್ ತಿಂಗಳಲ್ಲಿ ನಡೆದಂಥ ಸರ್ಕಾರಿ ಕಾರ್ಯಕ್ರಮಕ್ಕೆ ಕ್ಷೇತ್ರದ ಶಾಸಕನಾದ ನನ್ನನ್ನು ಕಡೆಗಣಿಸಿ ಮಾನ್ಯ ಜಿಲ್ಲಾ ಮಂತ್ರಿಗಳು ಅಧಿಕಾರಗಳ ಮೇಲೆ ಒತ್ತಡ ತಂದು ಆ ಕಾರ್ಯಕ್ರಮವನ್ನು ಮಾಡುವುದರ ಮೂಲಕ ನನ್ನ ಹಕ್ಕು ಚ್ಯುತಿ ಮಾಡಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಾಗ ಇನ್ನು ಮುಂದೆ ಶಿಷ್ಟಾಚಾರಗಳನ್ನು ಸೂಕ್ತ ರೀತಿಯಲ್ಲಿ ಪಾಲಿಸಿ ಶಾಸಕರುಗಳಿಗೆ ಗೌರವವನ್ನು ಕೊಡಿ ಎಂದು ಪತ್ರವನ್ನು ಬರೆದರು. ಹೀಗೆ ಪತ್ರ ಬರೆದಾದ ನಂತರವೂ ಏನಾಯಿತು ಎಂಬುದನ್ನು ನಾನು ಸಭೆಯ ಗಮನಕ್ಕೆ ತರಲು ತಮ್ಮ ಅಪ್ಪಣೆಯನ್ನು ಕೋರುತ್ತಿದ್ದೇನೆ. 21-10-2000 ರಂದು ಒಂದು ಕಾರ್ಯಕ್ರಮ. ಅದರ ಇನ್ವಿಟೇಶನ್ ಕೂಡ ತಮ್ಮ ಗಮನಕ್ಕೆ ತಂದಿದ್ದೇನೆ. ಅದರಲ್ಲಿ ಚಿನ್ನಸಂದ್ರ ಮುಜರಾಯಿ ದೇವಸ್ಥಾನದಲ್ಲಿ ನಡೆಯುವ ಒಂದು ಸರಕಾರಿ ಕಾರ್ಯಕ್ರಮ. ಆ ಕಾರ್ಯಕ್ರಮ ನಡೆಯುವ ನನ್ನ ಕ್ಷೇತ್ರದ ವ್ಯಾಪ್ತಿಯ ಕಾರ್ಯಕ್ರಮಕ್ಕೆ ನನ್ನನ್ನು ಮುಖ್ಯ ಅತಿಥಿ ಎಂದು ಕರೆದಿದ್ದಾರೆ. ಮತ್ತೊಂದು ಕಾರ್ಯಕ್ರಮ ಚಾಮರಾಜೇಶ್ವರ ದೇವಸ್ಥಾನದಲ್ಲಿ ನಡೆಯುವುದಕ್ಕೆ ಶ್ರೀ ಸಿ. ಗುರುಸ್ವಾಮಿ ಅಧ್ಯಕ್ಷರು ಎಂದು ಪ್ರಿಂಟ್ ಮಾಡಿದ್ದಾರೆ. ಹಾಗಾದರೆ ಈ ಇನ್ವಿಟೇಶನ್‌ಗಳನ್ನು ಮಾಡಿದವರು ಯಾರು? ಜಿಲ್ಲಾ ಮಂತ್ರಿಗಳ ನಿರ್ದೇಶನದಲ್ಲಿ ಅಧಿಕಾರಿಗಳು ಇದನ್ನು ಮಾಡಿದ್ದಾರೆ ಎಂಬುದು ನನ್ನ ಅಲಿಗೇಶನ್ ಆಗಿದೆ. ಇದರ ಮೂಲಕ ಶಾಸಕರಿಗೆ ಇರತಕ್ಕಂಥ ಹಕ್ಕನ್ನು ಮೊಟಕು ಗೊಳಿಸಿ ಅಪಮಾನ ಮಾಡಿದ್ದೀರಿ, ಏಕೆ ಈ ತರಹ ಆಗಿದೆ? ಕ್ಷೇತ್ರದಲ್ಲಿ ಬರತಕ್ಕಂಥ ಶಾಸಕರಿಗೆ ಯಾವುದೇ ಸರಕಾರಿ ಸಮಾರಂಭದಲ್ಲಿ ಅವರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮಗಳು ನಡೆಯಬೇಕೆಂಬ ಶಿಷ್ಟಾಚಾರವಿದೆ. ಮಾನ್ಯ ಮುಖ್ಯಮಂತ್ರಿಯವರು ಕೆ.ಆರ್.ಎಸ್.ನ ಒಂದು ಸಭೆಗೆ ಬಂದಾಗ ಶ್ರೀ ರಂಗಪಟ್ಟಣದ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ನೆರವೇರಿಸಿದರು. ಹಾಗಿರುವಾಗ ನನಗೆ ಮಾತ್ರ ನೀವು ಏಕೆ ಹೀಗೆ ಮಾಡುತ್ತಿದ್ದೀರಿ? ಇದಕ್ಕೆ ಕಾರಣಕರ್ತರು ಹಾಗೂ ಹೊಣೆಗಾರರು ಯಾರು

ಎಂಬುದನ್ನು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಯಾವುದೋ ಕಾರ್ಯಕ್ರಮಕ್ಕೆ ಒಂದು ಗಂಟೆ ಮುಂಚೆ ಡಿಸಿಯವರಿಗೆ ಹೇಳಿ ಕಾಗದ ಪ್ರಿಂಟ್ ಮಾಡಿ ಕೊಟ್ಟು ಬಿಟ್ಟರೆ ಅದು ಅಲ್ಲಿಯ ಶಾಸಕರಿಗೆ ಗೌರವ ಕೊಟ್ಟಂತಾಗುತ್ತದೆಯೇ? ಕಾರ್ಯಕ್ರಮ ರೂಪಿಸುವಾಗ ಶಾಸಕರ ಸಲಹೆ ಸೂಚನೆಗಳನ್ನು ಕೇಳುವ ಅವಶ್ಯಕತೆಯಿಲ್ಲವೇ?

(ಗೊಂದಲ)

ನಾನು ಈಲ್ಡ್ ಆಗುತ್ತಾ ಇಲ್ಲ. ನನಗೆ ನನ್ನ ವಿಚಾರಗಳನ್ನು ಹೇಳಲು ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕು. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಜನಪ್ರತಿನಿಧಿಯಾದ ನಾನು ಸರಕಾರಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾದುದು ನನ್ನ ಕರ್ತವ್ಯ. ಅದು ಶಂಕುಸ್ಥಾಪನೆ, ಉದ್ಘಾಟನೆ, ಮತ್ತಿತರ ಯಾವುದೇ ಕಾರ್ಯಕ್ರಮಗಳಿರಬಹುದು ಅಥವಾ ಮಂತ್ರಿಗಳು ಕ್ಷೇತ್ರದಲ್ಲಿ ಪ್ರವಾಸ ಮಾಡುವ ಕಾರ್ಯಕ್ರಮವೇ ಇರಬಹುದು, ನನ್ನ ಕ್ಷೇತ್ರದಲ್ಲಿ 16.50 ಲಕ್ಷ ರೂಪಾಯಿಗಳ ಮುಜರಾಯಿ ಇಲಾಖೆಯವರ ಒಂದು ಗುದ್ದಲಿ ಪೂಜೆ ಕಾರ್ಯಕ್ರಮವನ್ನು ನೀವು ಮಾಡಿದ್ದೀರಿ. ಅದಕ್ಕೆ ಮುಜರಾಯಿ ಇಲಾಖಾ ಸಚಿವರನ್ನು ಕರೆಯಬೇಕಾಗಿತ್ತು. ಯಾಕೆ ಕರೆಯಲಿಲ್ಲ? ಹೀಗೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳತಕ್ಕಂಥ ಸಂದರ್ಭಗಳಲ್ಲಿ ಅಧಿಕಾರಿಗಳಾಗಲೀ, ಜಿಲ್ಲಾ ಮಂತ್ರಿಗಳಾಗಲೀ, ನನ್ನ ಜೊತೆಗೆ ಸಮಾಲೋಚನೆ ಮಾಡಿಲ್ಲ. ಪೂರ್ವಭಾವಿಯಾಗಿ ಕಾರ್ಯಕ್ರಮದ ಕುರಿತು ಇಂಥ ದಿವಸ ಹಾಕಿಕೊಳ್ಳೋಣ ಎಂಬ ಬಗ್ಗೆ ಮಾತನಾಡಿಲ್ಲ. ನನಗೆ ಆ ದಿನಾಂಕವು ಅಡ್‌ಜಸ್ಟ್ ಆಗುತ್ತಿದೆಯೋ ಇಲ್ಲವೋ ಎಂಬ ಬಗ್ಗೆಯೂ ಅವರು ಗಮನಿಸುತ್ತಿಲ್ಲ. ಅವರು ಹೇಳಿದ ದಿನಾಂಕಕ್ಕೆ ಅವರೇ ಕಾರ್ಯಕ್ರಮ ರೂಪಿಸಿ ಪ್ರಿಂಟ್ ಮಾಡಿದ ಕಾಗದವನ್ನು ನನಗೆ ತಲುಪಿಸಿದ ಮೇಲೆ ನಾನು ಅಲ್ಲಿಗೆ ಹೋಗಿ ಉತ್ಸವ ಮೂರ್ತಿಯ ರೀತಿಯಲ್ಲಿ ಕುಳಿತುಕೊಂಡು ಬರುವುದು ಮಾತ್ರ ಅವರು ನನಗೆ ಕೊಡುವ ಕೆಲಸ. ಅದಕ್ಕಾಗಿಯೇ ನಾನು ಇರುವುದೇ? ಶಾಸಕನಾಗಿ ನನಗೆ ಯಾವ ಸ್ವಾತಂತ್ರ್ಯವೂ ಇಲ್ಲವೇ? ಈ ಎರಡು ಸ್ಪಷ್ಟ ನಿದರ್ಶನಗಳನ್ನು ನಾನು ತಮ್ಮ ಮುಂದೆ ತಂದಿದ್ದೇನೆ. ಇನ್ನೊಂದು ನಿದರ್ಶನವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಜಿಲ್ಲಾಧಿಕಾರಿಗಳ 28-8-2000ದ ಒಂದು ಆದೇಶ. ಅದರಲ್ಲಿ ಚಾಮರಾಜೇಶ್ವರ ದೇವಸ್ಥಾನದ 16.50 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಬೇಕಾಗಿದ್ದರೆ ಮುಜರಾಯಿ ಇಲಾಖೆಯ ಸರಕಾರಿ ಹಣವನ್ನು ಖರ್ಚು ಮಾಡುವ ಸಂದರ್ಭದಲ್ಲಿ ಶಾಸಕನಾದ ನನ್ನೊಂದಿಗೆ ಚರ್ಚಿಸಿ ಕ್ರಮ ಜರುಗಿಸುವ ಶಿಷ್ಟಾಚಾರವಿದೆ. ನೀತಿ ನಿಯಮಗಳೂ ಇವೆ. ಆದರೆ ಇವರು ಏನು ಮಾಡುತ್ತಿದ್ದಾರೆ? "ಸನ್ಮಾನ್ಯ ರೇಷ್ಮೆ ಹಾಗೂ ಜವುಳಿ ಖಾತೆ ಸಚಿವರು"....

ಅಧ್ಯಕ್ಷರು : ತಾವು ಪತ್ರಗಳನ್ನು ಓದಬೇಡಿ. ಓದುವುದು ಕನ್‌ಸೆಂಟ್ ಕೊಟ್ಟಾದ ಮೇಲೆ... ಈಗ ಸಾರಾಂಶವನ್ನು ಮಾತ್ರ ಹೇಳಿ.

ಶ್ರೀ ಸಿ. ಗುರುಸ್ವಾಮಿ : ನಾನು ಸಾರಾಂಶವನ್ನು ಮಾತ್ರ ತಮ್ಮ ಅಪ್ಪಣೆ ಮೇರೆಗೆ ಹೇಳುತ್ತೇನೆ. ನಾನು ಈ ಸದನಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥವನು. ಅಲ್ಪಸ್ವಲ್ಪ ಲೋಪ ದೋಷಗಳು ನನ್ನ ಕಡೆಯಿಂದ ಆಗಬಹುದು. ಆಗ ಹಿರಿಯ ಸಚಿವರುಗಳು ನನಗೆ ಪ್ರೋತ್ಸಾಹಿಸಬೇಕು. ಇಲ್ಲವಾದರೆ

ನಾನು ನನ್ನ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುವುದಿಲ್ಲ. ನಮಗೆ ಅವರು ಸಹಕಾರ ಕೊಡಬೇಕು. "ರೇಷ್ಮೆ ಹಾಗೂ ಜವುಳಿ ಖಾತೆ ಸಚಿವರು ಹಾಗೂ ಚಾಮರಾಜನಗರ ಉಸ್ತುವಾರಿ ಸಚಿವರು ದಿನಾಂಕ. 24-1-2000 ದಂದು ಚಾಮರಾಜನಗರ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿದ ಸಮಯದಲ್ಲಿ ಆದೇಶ ನೀಡಿದ ಮೇರೆಗೆ ಕೆಲಸವನ್ನು ತೆಗೆದುಕೊಳ್ಳಲಾಗಿದೆ. ಎಂದು ಹೇಳುತ್ತಾರೆ. ಡಿಸಿಯವರು 16.50 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡುವಾಗ ಟೆಂಡರ್ ಇತ್ಯಾದಿಗಳನ್ನು ಕರೆಯುವ ಕೆಲಸವನ್ನು ಮಾಡಬೇಡವೆ?

ಅಧ್ಯಕ್ಷರು : ಈಗ ನಿಮ್ಮ ಹಕ್ಕುಚ್ಯುತಿ ಆಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ಹೇಳಿ. ಅದು ಅಧಿಕಾರಿಗಳಿಂದ ಇರಬಹುದು, ಮಂತ್ರಿಗಳಿಂದ ಇರಬಹುದು. ಅದನ್ನು ಸ್ಪಷ್ಟವಾಗಿ ಚುಟುಕಾಗಿ ಹೇಳಿ.

ಶ್ರೀ ಸಿ. ಗುರುಸ್ವಾಮಿ : ತಮ್ಮ ಆದೇಶವನ್ನು ಪಾಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಪತ್ರವನ್ನು ಬರೆದ.ನಂತರವೂ ಕೂಡ ಇದೇ ರೀತಿಯ ತೊಂದರೆಯಾಗುತ್ತಿರತಕ್ಕಂಥಾದ್ದು ಮುಂತಾಗಿ ಎಲ್ಲಾ ಪುರಾವೆಗಳನ್ನು ನಾನು ತಮಗೆ ಸಲ್ಲಿಸಿದ್ದೇನೆ. ನಾನು ಪ್ರಮುಖವಾಗಿ ಹೇಳುವುದೇನೆಂದರೆ ಅಧಿಕಾರಿಗಳಿಗಿಂತ ಹೆಚ್ಚಾಗಿ ನಮ್ಮ ಜಿಲ್ಲಾ ಮಂತ್ರಿಗಳ ಒತ್ತಡದಿಂದಾಗಿ ಅಧಿಕಾರಿಗಳು ಅವರ ಭಯದಿಂದಲೋ, ಒತ್ತಡದಿಂದಲೋ ಈ ತರಹದಲ್ಲಿ ಮಾಡುತ್ತಾ ಇದ್ದಾರೆ. ಅದು ಯಾರಿಂದಲೇ ಆಗಲಿ, ನನಗೆ ಆ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತಾ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹಾದೇವ್ (ರೇಷ್ಮೆ ಸಚಿವರು) : ಅಧ್ಯಕ್ಷರೇ, ನಾನು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೇನೆ. ಸರ್ಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಜವಾಬ್ದಾರಿ ನನ್ನದು. ಆ ಜಿಲ್ಲೆಯ ರಾಜಕೀಯಕ್ಕಾಗಲಿ ಅಥವಾ ಶಾಸಕರ ಹಕ್ಕಿಗೆ ಚ್ಯುತಿ ತರುವುದಕ್ಕಾಗಲಿ ನಾನು ಯಾವರೀತಿಯಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ. ಮುಂದೆಯೂ ಮಾಡುವುದಿಲ್ಲ. ಇನ್ನೊಂದು ವಿಚಾರ ಈ ಇನ್ವಿಟೇಶನದು. ನಾನು ಪ್ರತಿ ಸಭೆಯಲ್ಲೂ ಹೇಳಿದ್ದೇನೆ. ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲೇ ಸರ್ಕಾರಿ ಸಮಾರಂಭ ಮಾಡಬೇಕು, ಹಾಗೆ ಮಾಡದೇ ಇದ್ದರೆ ಅದಕ್ಕೆ ನೀವೇ ಜವಾಬ್ದಾರಿ ಆಗುತ್ತೀರಿ ಅಂತ ಅಧಿಕಾರಿಗಳಿಗೆ ಹೇಳಿದ್ದೇನೆ. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾನೂ ಶಾಸಕನಾಗಿದ್ದವನು, ವಿರೋಧಪಕ್ಷದಲ್ಲಿದ್ದವನು. ಈಗ ಇಲ್ಲಿಗೆ ಬಂದಿದ್ದೇನೆ. ಶಾಸಕರ ಹಕ್ಕಿಗೆ ಚ್ಯುತಿಯಾಗದಂತೆ ನೋಡಿಕೊಳ್ಳಬೇಕೆಂದೂ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಮುಖ್ಯವಾಗಿ ನಾನು ಯಾರ ಬಗ್ಗೆಯೂ ಹಸ್ತಕ್ಷೇಪವಂತೂ ಮಾಡುವುದಿಲ್ಲ. ಯಾಕೋ ಇವರ ಪ್ರತಿ ವಾಕ್ಯದಲ್ಲೂ ಮಂತ್ರಿಗಳ ಕುಮ್ಮಕ್ಕಿನಿಂದಲೇ ಅಧಿಕಾರಿಗಳು ಹಕ್ಕುಚ್ಯುತಿ ಎಸಗುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ದೇವಸ್ಥಾನದ ಉದ್ಘಾಟನೆ ಸಂಬಂಧ ಜಿಲ್ಲಾಧಿಕಾರಿಗಳು ಕಾರ್ಯಕ್ರಮ ಹಾಕಿದಾಗ ಮಾನ್ಯ ಶಾಸಕರಿಗೆ ಅನುಕೂಲವಾಗುವ ದಿನಾಂಕದಂದು ದೇವಸ್ಥಾನದ ಕೆಲಸಕಾರ್ಯ ತೆಗೆದುಕೊಳ್ಳಿ, ಅವರ ಅಧ್ಯಕ್ಷತೆಯಲ್ಲೇ ಮಾಡಿರಿ ಎಂದೆ. ಅವರೂ ಅದೇ ಪ್ರಕಾರ ಇವರನ್ನು ಕನ್‌ಸಲ್ಟ್ ಮಾಡಿ ಜೀರ್ಣೋದ್ಧಾರದ ಬಗ್ಗೆ ದಿನಾಂಕ ಫಿಕ್ಸ್ ಮಾಡಿ ಇನ್ವಿಟೇಶನ್ ಮಾಡಿಸಿ ನನಗೆ ತಿಳಿಸಿದ್ದಾರೆ. ಇನ್ನೊಂದು, ಸಣ್ಣ ಸಮಾರಂಭ

ಅಧ್ಯಕ್ಷರೇ. ಜಿಲ್ಲಾಪಂಚಾಯ್ತಿ ವ್ಯಾಪ್ತಿಗೆ ಬರುವ ಕುಡಿಯುವ ನೀರಿನದು. ಅವರು ಹೇಳುವುದು ಏನೆಂದರೆ ನಮ್ಮ ಜಿಲ್ಲಾಪಂಚಾಯ್ತಿ ವ್ಯಾಪ್ತಿಗೆ ಬರುವ ಕಾರ್ಯಕ್ರಮಗಳನ್ನು ಮಾಡುವುದು, ಆದ್ದರಿಂದ ಜಿಲ್ಲಾಪಂಚಾಯ್ತಿ ಅಧ್ಯಕ್ಷರ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮ ಮಾಡುತ್ತೇವೆ, ನೀವು ಮುಖ್ಯ ಅತಿಥಿಗಳಾಗಿ, ಶಾಸಕರು ಮುಖ್ಯ ಅತಿಥಿಗಳಾಗಿರಲಿ. ಸರ್ಕಾರಿ ಸಮಾರಂಭಗಳು ಮಾತ್ರ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯಲಿ. ನಮ್ಮ ಕಾರ್ಯಕ್ರಮ ಮಾಡುತ್ತೇವೆ, ನೀವು ಮುಖ್ಯ ಅತಿಥಿಗಳಾಗಿ, ಶಾಸಕರು ಮುಖ್ಯ ಅತಿಥಿಗಳಾಗಿರಲಿ. ಸರ್ಕಾರಿ ಸಮಾರಂಭಗಳು ಮಾತ್ರ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯಲಿ. ನಮ್ಮ ಕಾರ್ಯಕ್ರಮಕ್ಕೇ ನೀವು ನಮ್ಮನ್ನು ಮುಖ್ಯ ಅತಿಥಿ ಎಂದು ಮಾಡಿದರೆ ನಾವು ಯಾರ ಮೊರೆ ಹೋಗೋಣ? ಎಂದು ಜಿಲ್ಲಾಪಂಚಾಯ್ತಿ ಅಧ್ಯಕ್ಷರು ಹೇಳುವರು. ನಾವು ಸಹ ಚುನಾಯಿತ ಪ್ರತಿನಿಧಿಗಳೇ, ಸ್ಟೇಟ್ ರ್ಯಾಂಕ್ ಸಚಿವರ ಸ್ಥಾನಮಾನ ನಮಗೂ ಇದೆ ನೀವು ನಮ್ಮನ್ನು ಮುಖ್ಯ ಅತಿಥಿ ಎಂದು ಮಾಡುವುದನ್ನು ಹೇಗೆ ಒಪ್ಪಲು ಸಾಧ್ಯವೆಂದು ಇದೆಲ್ಲಾ ಘಟನೆ ಆದ ಮೇಲೆ ವಿಚಾರಣೆ ಮಾಡಿದಾಗ ನನಗೆ ಮಾಹಿತಿ ದೊರೆಯಿತು. ಇವರ ಜೊತೆಯಲ್ಲಿ ನಾನು ಸಹ ಎಷ್ಟೋ ಸ್ಪಂದಿಸಿ ಇವರ ಕ್ಷೇತ್ರಕ್ಕೆ ಅಭಿವೃದ್ಧಿ ಕೆಲಸ ಮಾಡಿಕೊಡಬೇಕೆಂದು ನಮ್ಮದು ಆಶಯ ಇದೆ, ಅದು ಬಿಟ್ಟು ಇವರೊಡನೆ ಘರ್ಷಣೆ ಮಾಡಿಕೊಳ್ಳ ಬೇಕೆಂದಿಲ್ಲ. ಅದು ನನ್ನ ಸ್ವಂತ ಜಿಲ್ಲೆಯೂ ಅಲ್ಲ. ಅದು ಹೊಸ ಜಿಲ್ಲೆ, ಎಲ್ಲ ಅಭಿವೃದ್ಧಿ ಮಾಡೇಬೇಕೆಂದು ಅಲ್ಲಿಗೆ ಹೋದೆ. ಅಲ್ಲಿ ನಾನೇನು ಚುನಾವಣೆಗೆ ನಿಂತುಕೊಳ್ಳುವವನಲ್ಲ. ನನ್ನ ಜಿಲ್ಲೆಯೇ ಬೇರೆ, ಮೈಸೂರು ಜಿಲ್ಲೆ. ನನಗೆ ಮುಖ್ಯಮಂತ್ರಿಗಳು ಜವಾಬ್ದಾರಿ ಕೊಟ್ಟಿದ್ದಾರೆ ಅದನ್ನು ನಾನು ಸರಿಯಾಗಿ ನಿರ್ವಹಿಸಬೇಕು ಎಂಬ ದೃಷ್ಟಿಯಿಂದ ನಾನು ಅಲ್ಲಿಗೆ ಹೋದೆ. ಅಲ್ಲಿ ಅಭಿವೃದ್ಧಿ ಕೆಲಸಗಳಾದರೆ ಮಾನ್ಯ ಸದಸ್ಯರಿಗೆ ಒಳ್ಳೆಯ ಹೆಸರು ಬರುತ್ತದೆ. ಚಾಮರಾಜನಗರ ಜಿಲ್ಲಾ ಕೇಂದ್ರವಾಗಿರುವುದರಿಂದ ಆ ಪಟ್ಟಣ ಇವರ ವ್ಯಾಪ್ತಿಗೆ ಬರುವುದರಿಂದ ಅಲ್ಲಿಯ ಶಾಸಕರಿಗೆ ಒಳ್ಳೆಯ ಹೆಸರು ಬರುತ್ತದೆ. ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಇವರ ಅಧ್ಯಕ್ಷತೆಯಲ್ಲೇ ದೇವಸ್ಥಾನದಲ್ಲಿ ಸಭೆ ಮಾಡಿದೆವು. ಸೌಜನ್ಯಕ್ಕಾದರೂ ಸಚಿವರ ಜೊತೆ ದೇವಸ್ಥಾನಕ್ಕೆ ಹೋಗೋಣ, ಪೂಜೆ ಮಾಡಿಸೋಣ ಎಂದು ಯೋಚನೆ ಮಾಡದೆ, ದೇವಸ್ಥಾನದ ಒಳಗಡೆ ಶಾಮಿಯಾನ ವೇದಿಕೆ ಏನು ನಿರ್ಮಾಣ ಮಾಡಿದ್ದರು ಅದರಲ್ಲಿ ಇವರು ಐದಾರು ಜನರನ್ನು ಕಟ್ಟಿಕೊಂಡು ಸ್ಟೈಕ್ ತರಹ ಕೂತು ಬಿಟ್ಟಿದ್ದಾರೆ. ನಾನು ದೇವಸ್ಥಾನಕ್ಕೆ ಹೋದೆ, ಪೂಜೆಗೆಂದು, ಎಲ್ಲಿ ಶಾಸಕರು ಎಂದು ಕೇಳಿದಾಗ...

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಮ್ಮನ್ನು ಡಿಟೇಲಾಗಿ ಮಾತನಾಡಬೇಡಿ ಎಂದಿರಿ, ಈಗ ಮಾನ್ಯ ಸಚಿವರು ಡಿಟೇಲಾಗಿ ಮಾತನಾಡುತ್ತಿದ್ದಾರೆ.

ಶ್ರೀ ಎಂ. ಮಹಾದೇವ್ : ಆಯಿತು, ಎರಡೇ ವಾಕ್ಯದಲ್ಲಿ ಮುಗಿಸುತ್ತೇನೆ. ನಾನು ದೇವಸ್ಥಾನಕ್ಕೆ ಹೋದೆ. ಇವರು ವೇದಿಕೆ ಒಳಗೆ ಐದಾರು ಜನರನ್ನು ಕಟ್ಟಿಕೊಂಡು ಸ್ಟೈಕ್ ತರಹಕೂತು, ಆ ದೇವರ ದರ್ಶನಕ್ಕೂ ಬರುವುದಿಲ್ಲ ಪೂಜೆಗೂ ಬರೋಲ್ಲರು. ಅಧ್ಯಕ್ಷತೆ ಅಂತ ಹಾಕಿದರೆ ಸ್ಟೈಕ್ ಕೂತು ಕೊಳ್ಳುತ್ತಾರೆ. ಮುಖ್ಯ ಅತಿಥಿಗಳಾದರೆ ಸಭೆಗೆ ಬರುವುದಿಲ್ಲ. ನನ್ನ ಪಿತೂರಿ ಅಂತಾರೆ. ಅಧ್ಯಕ್ಷರೇ, ನಾನ್ಯಾಕೆ ಇವರ ವಿರುದ್ಧ ಅಲ್ಲಿ ಹೋಗಿ ಜಿಲ್ಲಾಧಿಕಾರಿ ಮತ್ತಿತರ ಅಧಿಕಾರಿಗಳಿಗೆ ಇವರ ಹೆಸರು ಹಾಕಬೇಡಿ ಅಂತ ಮಾಡಲಿ? ನನಗೆ ಮಾಡಲು ಉತ್ತಮ ಕೆಲಸಗಳಿವೆ. ಮಾನ್ಯ ಸದಸ್ಯರ ಹಕ್ಕಿನ ಬಗ್ಗೆ ಅನಗತ್ಯವಾಗಿ

ನಾನ್ಯಾಕೆ ಹೋಗಲಿ? ಇವರು ತಪ್ಪು ಕಲ್ಪನೆಯಿಂದ ನನ್ನ ವಿರುದ್ಧ ಅಪಾದನೆ ಮಾಡುತ್ತಿದ್ದಾರೆ. ಅಧಿಕಾರಿಗಳು ಅಂತಹ ತಪ್ಪು ಮಾಡಿಲ್ಲ, ಮಾಡಿದ್ದರೆ ಅವರ ವಿರುದ್ಧ ನಾವು ಕ್ರಮ ಜರುಗಿಸುತ್ತೇವೆ.

ಅಧ್ಯಕ್ಷರು : ವೆರಿಗುಡ್, ವಂದನೆಗಳು. ಇದು ಒಬ್ಬರ ಪ್ರಿವಿಲೇಜಲ್ಲ, ಎಲ್ಲ ಸದಸ್ಯರಿಗೂ ಸಂಬಂಧಿಸಿದ್ದು. ಈಗ ಎರಡೂ ಕಡೆ ಕೇಳಿದ್ದೇನೆ. ಇಂತಹ ಪ್ರಿವಿಲೇಜ್ ಬಗ್ಗೆ ಅನೇಕ ರೂಲಿಂಗ್ಸ ಇವೆ ಇದಕ್ಕೆ ಕನ್ಸೆಂಟ್ ಕೊಡಬೇಕೋ ಬೇಡವೋ ಎಂದು ರೂಲಿಂಗ್ ಕೊಡುತ್ತೇನೆ. ಅದನ್ನು ಆಮೇಲೆ ನೋಡಿಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ಇಂಥದರ ಬಗ್ಗೆ ಬೇರೆ ಬೇರೆ ಶಾಸಕರೂ ಮಾತನಾಡಿದ್ದಾರೆ. ಅದಕ್ಕಾಗಿ ಇವರನ್ನೆಲ್ಲ ಒಮ್ಮೆ ಕರೆಯಿರಿ. ಮಾತನಾಡಿ. ಇಲ್ಲದಿದ್ದರೆ ಹಾಗೇ ಇದು ರಿಪಿಟಿಶನ್ ಆಗುತ್ತದೆ.

ಶ್ರೀ ವಿ. ಪಾಪಣ್ಣ (ಹುಣಸೂರು) : ಅಧ್ಯಕ್ಷರೇ, ನಿಮಗೆ ಕೈಮುಗಿಯುತ್ತೇನೆ, ಒಂದೇ ವಿಚಾರ. ಜಿಲ್ಲಾಪಂಚಾಯ್ತಿ ಅಧ್ಯಕ್ಷರು ಕೇಳಿದ್ದಕ್ಕೆ ಸಚಿವರು ಅವರ ಹೆಸರನ್ನೇ ಹಾಕಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ?

ಶ್ರೀ ಎಂ. ಮಹಾದೇವ್ : ಅವರ ಹೆಸರನ್ನು ಹಾಕಲು ನಾನು ಅಧಿಕಾರಿಯಲ್ಲ, ಸಂಬಂಧಿತ ಅಧಿಕಾರಿ ಹಾಕಿರುವುದು. ನೀವು ತಪ್ಪು ಕಲ್ಪನೆಯಿಂದ ಹೇಳಬೇಡಿ.

ಅಧ್ಯಕ್ಷರು : ಮಾನ್ಯ ಸಚಿವರಾದ ಖರ್ಗೆಯವರು ಒಂದು ಸಲಹೆ ಕೊಟ್ಟರು. ಇದರ ಬಗ್ಗೆ ಅನೇಕ ಸದಸ್ಯರ ಸಮಸ್ಯೆ ಇದೆ. ನನಗೂ ಬೇಕಾದಷ್ಟು ದೂರು ಬಂದಿವೆ. ಇದನ್ನೆಲ್ಲ ಒಮ್ಮೆ ಕೂತು ಸಮಗ್ರವಾಗಿ ಚರ್ಚೆ ಮಾಡೋಣ. ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ಅವರೂ ಒಪ್ಪಿದ್ದಾರೆ. ನಿನ್ನೆಯೇ ಸೇರಿಸೋಣ ಅಂತಿದ್ದೆ. ಆದರೆ ನಿನ್ನೆ ಇಬ್ಬರೂ ವಿರೋಧಪಕ್ಷದ ನಾಯಕರು ಅಲ್ಲಿ ಮಾತನಾಡುತ್ತಿದ್ದರು, ಅಲ್ಲಿ ನಾವು ಹೇಗೆ ಸೇರುವುದು? ಇವತ್ತು ಸಿಎಂ ಬಂದು ಹೋಗಿದ್ದಾರೆ ನಾಳೆನೋ ನಾಡಿದ್ದೋ ಸೇರಿಸಿ, ಆ ಸಂದರ್ಭದಲ್ಲಿ ಬೇರೆ ಸದಸ್ಯರಿಗೂ ಹಕ್ಕುಚ್ಯುತಿ ಆಗಿದ್ದರೆ ಅಲ್ಲಿಗೆ ಅವರು ಬರಬಹುದು. ಈಗ ಇದನ್ನು ಕ್ಲೋಸ್ ಮಾಡೋಣ. ಇನ್ನು ಶೂನ್ಯ ವೇಳೆ ಪ್ರಸ್ತಾಪಕ್ಕಾಗಿ ಎರಡು ಪ್ರಸ್ತಾವಗಳು ಬಂದಿವೆ. ಒಂದು, ಆರ್. ಅಶೋಕ್ ಮತ್ತು ಕೆ.ಎನ್. ಸುಬ್ಬಾರೆಡ್ಡಿಯವರು. ಬೆಂಗಳೂರು ನಗರದ 16 ರಸ್ತೆಗಳಲ್ಲಿ ವಾಹನ ನಿಲುಗಡೆ ಶುಲ್ಕ ಪದ್ಧತಿಯನ್ನು ನವೆಂಬರ್ ಒಂದರಿಂದ ಜಾರಿಗೊಳಿಸಲು ನಿರ್ಧರಿಸಿರುವ ಬಗ್ಗೆ ಹಾಗೂ ಅದರಿಂದ ನಾಗರೀಕರಿಗೆ ಉಂಟಾಗಿರುವ ತೊಂದರೆ ಬಗ್ಗೆ. ಅದಕ್ಕೆ ಉತ್ತರ ಬಂದಿದೆ. ಆದರೆ ಉತ್ತರ ಕೊಡಬೇಕಾದ ಮಾನ್ಯ ಮುಖ್ಯಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ. ನಾಳೆ ತೆಗೆದುಕೊಳ್ಳೋಣ.

ಶ್ರೀ ಗೋಪಾಲ ಪೂಜಾರಿ (ಬೈಂದೂರು) : ಅಧ್ಯಕ್ಷರೇ, ತಮ್ಮಲ್ಲಿ ಒಂದು ನಿವೇದನೆ, ನಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದ ಸಣ್ಣಪುಟ್ಟ, ವಿಶೇಷ ಸಮಸ್ಯೆಗಳಿರುತ್ತವೆ ಆದ್ದರಿಂದ ಪ್ರತಿ ದಿವಸ ಶೂನ್ಯವೇಳೆ ತೆಗೆದುಕೊಳ್ಳುತ್ತಿದ್ದರೆ ಒಳ್ಳೆಯದು.